ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ ವಾರ್ತಾಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

ಸಂಪುಟ : 3 । ಸಂಚಿಕೆ : 9 | ಸೆಪ್ಟೆಂಬರ್ : 2021 | ಪುಟಗಳು : 20 । ಬೆಲೆ : 25/–

## ನಾಡಿನ ಸಮಸ್ತ ಸಹಕಾರಿ ಬಂಧುಗಳಿಗೆ

## ಗೌರಿ–ಗಣೇಶ ಹಬ್ಬದ ಶುಭಾಶಯಗಳು









**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**
ಅಧ್ಯಕ್ಷರು

**ಡಾ. ಬಿ.ಡಿ. ಭೂಕಾಂತ**
ಉಪಾಧ್ಯಕ್ಷರು

ಹಾಗೂ ಆಡಳಿತ ಮಂಡಳಿ ಸದಸ್ಯರುಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ, ಬೆಂಗಳೂರು.



**ಶಿಕಾರಿಪುರ :** ದಿನಾಂಕ : 15.08.2021 ರಂದು 75ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಬಸವೇಶ್ವರ ಸಹಕಾರಿ ಒಕ್ಕೂಟದಡಿಯಲ್ಲಿ ಬರುವ ಸುಮಾರು 19 ಸಹಕಾರ ಸಂಘಗಳ ಪದಾಧಿಕಾರಿಗಳು ಸೇರಿ ವಿಶೇಷ ಪೂಜಾ ಕಾರ್ಯವನ್ನು ಏರ್ಪಡಿಸಿದ್ದರು. ರಾಷ್ಟ್ರಧ್ವಜಾರೋಹಣವನ್ನು ಸಹಕಾರಿ ಮುಖಂಡರಾದ ಸಹಕಾರ ರತ್ನ ಡಾ. ಬಿ.ಡಿ. ಭೂಕಾಂತ ರವರು ನೆರವೇರಿಸಿದರು. ಕೋವಿಡ್–19 ಮಹಾಮಾರಿಯನ್ನು ಹೋಗಲಾಡಿಸಲು ಹಾಗೂ ಸಹಕಾರ ಸಂಘಗಳು ಉನ್ನತಿ ಹೊಂದಲು ಪೂಜಾ ಕಾರ್ಯಕ್ರಮವನ್ನು ನೆರವೇರಿಸಲಾಯಿತು.

# ಬ್ಯಾಂಕ್ ಲಾಕರ್ : ಆರ್‌ಬಿಐನಿಂದ ಹೊಸ ನಿಯಮ



**ಮುಂಬೈ :** ಬ್ಯಾಂಕ್ ಲಾಕರ್‌ಗಳಿಗೆ ಅನ್ವಯವಾಗುವ ಪರಿಷ್ಕೃತ ನಿಯಮಗಳನ್ನು ಆರ್‌ಬಿಐ ಹೊರಡಿಸಿದೆ. ಇದರ ಅನ್ವಯ, ಅಗ್ನಿ ಅನಾಹುತ, ಕಳ್ಳತನ, ಕಟ್ಟಡ ಕುಸಿತ ಅಥವಾ ಬ್ಯಾಂಕ್‌ನ ಸಿಬ್ಬಂದಿಯಿಂದ ವಂಚನೆ ನಡೆದಲ್ಲಿ ಬ್ಯಾಂಕ್‌ಗಳು ಭರಿಸಬೇಕಾದ ಮೊತ್ತವು ಲಾಕರ್‌ನ ವಾರ್ಷಿಕ ಬಾಡಿಗೆ ಮೊತ್ತದ ನೂರು ಪಟ್ಟು ಮೊತ್ತಕ್ಕೆ ಸೀಮಿತ ಆಗಲಿದೆ.

ಪರಿಷ್ಕೃತ ನಿಯಮಗಳು 2022ರ ಜನವರಿ 1ರಿಂದ ಜಾರಿಗೆ ಬರಲಿವೆ. ಇದರ ಅಡಿಯಲ್ಲಿ, ಅಕ್ರಮವಾದ ಅಥವಾ ಅಪಾಯಕಾರಿಯಾದ ಯಾವುದೇ ವಸ್ತುವನ್ನು ಲಾಕರ್‌ನಲ್ಲಿ ಇರಿಸುವುದಿಲ್ಲ ಎಂಬ ಒಪ್ಪಂದಕ್ಕೆ ಬ್ಯಾಂಕ್‌ಗಳು ಲಾಕರ್ ಸೌಲಭ್ಯ ಪಡೆಯುವವರಿಂದ ಸಹಿ ಮಾಡಿಸಿಕೊಳ್ಳಬೇಕಾಗುತ್ತದೆ. ಹೊಸ ನಿಯಮಗಳು ಈಗಾಗಲೇ ಇರುವ ಲಾಕರ್‌ಗಳಿಗೂ, ಹೊಸ ಲಾಕರ್‌ಗಳಿಗೂ ಅನ್ವಯವಾಗಲಿದೆ.

ಬ್ಯಾಂಕ್‌ಗಳು ಲಾಕರ್ ಹಂಚಿಕೆ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳಬೇಕು ಎಂದು ಆರ್‌ಬಿಐ ಹೇಳಿದೆ. ಹಂಚಿಕೆ ಮಾಡಲು ಲಾಕರ್‌ಗಳು ಲಭ್ಯವಿಲ್ಲದಿದ್ದರೆ, ಲಾಕರ್ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಿದವರಿಗೆ, ಅರ್ಜಿ ಸ್ವೀಕೃತಿ ಪತ್ರ ನೀಡಬೇಕು. ಕಾಯುವಿಕೆ ಸಂಖ್ಯೆಯನ್ನು ಕೂಡ ಅವರಿಗೆ ನೀಡಬೇಕು ಎಂದು ಪರಿಷ್ಕೃತ ನಿಯಮಗಳಲ್ಲಿ ಹೇಳಲಾಗಿದೆ. ಯಾವುದೇ ಪ್ರಾಕೃತಿಕ ವಿಕೋಪದಿಂದಾಗಿ, ಭೂಕಂಪ, ಪ್ರವಾಹ, ಸಿಡಿಲು ಅಥವಾ ಮನುಷ್ಯನ ನಿಯಂತ್ರಣಕ್ಕೆ ಮೀರಿದ ಸಂಗತಿಗಳಿಂದಾಗಿ, ಗ್ರಾಹಕನ ಪೂರ್ಣ ಅಜಾಗರೂಕತೆಯಿಂದಾಗಿ ಲಾಕರ್‌ನಲ್ಲಿ ಇರಿಸಿದ ವಸ್ತುವಿಗೆ ಹಾನಿಯಾದರೆ ಬ್ಯಾಂಕ್ ಹೊಣೆಗಾರ ಅಲ್ಲ' ಎಂದು ಸ್ಪಷ್ಟಪಡಿಸಲಾಗಿದೆ. ಆದರೆ, ಲಾಕರ್ ಇರುವ ಸ್ಥಳದ ಸುರಕ್ಷತೆಯ ಮೇಲೆ ನಿಗಾ ಇಡಬೇಕಾಗಿರುವುದು ಬ್ಯಾಂಕ್‌ನ ಹೊಣೆ ಎಂದು ಹೇಳಲಾಗಿದೆ.

ಗ್ರಾಹಕರ ವಿಚಾರದಲ್ಲಿ ತಮಗೆ ಯಾವುದೇ ಹೊಣೆ ಇಲ್ಲವೆಂದು ಬ್ಯಾಂಕ್‌ಗಳು ಹೇಳುವಂತಿಲ್ಲ. ಅಗ್ನಿ ಅನಾಹುತ, ಕಳ್ಳತನ ಅಥವಾ ಬ್ಯಾಂಕ್ ಸಿಬ್ಬಂದಿಯಿಂದ ವಂಚನೆ ನಡೆದಲ್ಲಿ ಬ್ಯಾಂಕ್ ಹೊಣೆ ಹೊರಬೇಕಾಗುತ್ತದೆ. ಆ ಹೊಣೆಯು ಲಾಕರ್‌ನ ಅಂದಿನ ವಾರ್ಷಿಕ ಬಾಡಿಗೆ ಮೊತ್ತದ ನೂರುಪಟ್ಟಿಗೆ ಸೀಮಿತ ಆಗಿರುತ್ತದೆ ಎಂದು ನಿಯಮಗಳಲ್ಲಿ ಹೇಳಲಾಗಿದೆ. ಲಾಕರ್ ಸೌಲಭ್ಯ ಪಡೆದವರು ಸತತ ಮೂರು ವರ್ಷ ಬಾಡಿಗೆ ನೀಡದಿದ್ದಲ್ಲಿ, ನಿಯಮಗಳ ಅನುಸಾರ ಲಾಕರ್ ಒಡೆಯುವ ಅಧಿಕಾರವು ಬ್ಯಾಂಕ್‌ಗಳ ಬಳಿ ಇರಲಿದೆ. ಸರ್ಕಾರಿ ಸ್ವಾಮ್ಯದ ದೊಡ್ಡ ಬ್ಯಾಂಕೊಂದು ಸಣ್ಣ ಗಾತ್ರದ ಲಾಕರ್ ಸೌಲಭ್ಯಕ್ಕೆ ವಾರ್ಷಿಕ ರೂ.2,000, ಮಧ್ಯಮ ಗಾತ್ರದ ಲಾಕರ್‌ಗೆ ರೂ.4,000 (ನಗರ ಮತ್ತು ಮಹಾನಗರಗಳಲ್ಲಿ) ಹಾಗೂ ದೊಡ್ಡ ಪ್ರಮಾಣದ ಲಾಕರ್‌ಗೆ ರೂ.8,000 ಬಾಡಿಗೆ ಪಡೆಯುತ್ತದೆ. ಈ ಮೊತ್ತದಲ್ಲಿ ಜಿಎಸ್‌ಟಿ ಸೇರಿಲ್ಲ.

# ಕೊರೋನಾ ಕಸಿದುಕೊಂಡ ಸಂಪಾದನೆ / ಆದಾಯ

ಜಾತಕ ಫಲ, ಜನ್ಮ ದೋಷ ಪರಿಹಾರ, ಮುಂಜಿ ದಿನಾಂಕ, ವಿವಾಹ, ಗೃಹ ಪ್ರವೇಶ, ಷಷ್ಠಿ ಶಾಂತಿ, ತಿಥಿ ಕಾರ್ಯ, ಇತ್ಯಾದಿ ಕಾರ್ಯಗಳಲ್ಲಿ ಅವಶ್ಯಕ / ಅನವಶ್ಯಕ ಸೇರಿದಂತೆ ನೆರವೇರಿಸಲು ಸಹಕರಿಸುತ್ತಿದ್ದ / ಮಾರ್ಗದರ್ಶನ ನೀಡುತ್ತಿದ್ದ ಪೌರೋಹಿತ್ಯ ವರ್ಗಕ್ಕೆ ಸಂಪಾದನೆಯನ್ನು ಕೊರೋನ ಕಳೆದು ಕೊಳ್ಳಲಿಲ್ಲವೇ?

ಯಾವುದೇ ಶುಭ ಸಮಾರಂಭಗಳಿಗೆ ಚಪ್ಪರ, ಅಲಂಕಾರ (ಶವಕ್ಕೂ ಸೇರಿದಂತೆ) ವಾದ್ಯಗೋಷ್ಠಿ, ನಾದಸ್ವರ, ಅಡುಗೆ ಕಾರ್ಯ, ಸ್ವಚ್ಛತೆ ಕಾರ್ಯ, ನೀರು/ ವಿದ್ಯುತ್ ಬಳಕೆ, ಮುದ್ರಣ, ಮೆಹಂದಿ ಕಾರ್ಯ, ಹೂವಿನ ಅಲಂಕಾರ, ಸ್ವಾಗತಕಾರರು, ಬೌನ್ಸರ್‌ಗಳು, ಸರಕು ವಾಹನ, ದಿನಸಿ, ಹಣ್ಣು ಮತ್ತು ತರಕಾರಿ ವ್ಯಾಪಾರಸ್ಥರು, ಇತ್ಯಾದಿ ಇವರುಗಳ ದಿನದ ಸಂಪಾದನೆ / ಆದಾಯವನ್ನು ಕೊರೋನಾ ಕಸಿದುಕೊಳ್ಳಲಿಲ್ಲವೇ?

ಆಡಂಬರ ಕಾರ್ಯಗಳಿಲ್ಲದೆ ಹೆಚ್ಚಿನ ವಿದ್ಯುತ್ ಬಳಸಲಿಲ್ಲ. ನೀರು ಬಳಸಲಿಲ್ಲ. ಮುದ್ರಣ ಸಾಮಾಗ್ರಿ ಖರೀದಿಸಲಿಲ್ಲ. ಮದ್ಯ ಖರೀದಿಸಲಿಲ್ಲ. ಕಲ್ಯಾಣ ಮಂಟಪ ಬಳಸಲಿಲ್ಲ. ಆಮಂತ್ರಣ ಪತ್ರಿಕೆ ಹಂಚಲಿಲ್ಲ. ಇವುಗಳೆಲ್ಲದರಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷ ತೆರಿಗೆ ಸರ್ಕಾರಕ್ಕೆ ಬರುತ್ತಿರಲಿಲ್ಲವೇ? ಸರ್ಕಾರದ ತೆರಿಗೆಯನ್ನು ಕೊರೋನ ಕಿತ್ತುಕೊಂಡಿತಲ್ಲವೇ?

ಚಪ್ಪರ ಹಾಕದಿದ್ದರಿಂದ ಗಿಡಮರಗಳನ್ನು ಕಡಿಯಲಿಲ್ಲ. ವಾದ್ಯಗೋಷ್ಠಿ ಬಳಸದ್ದರಿಂದ ಶಬ್ಧ ಮಾಲಿನ್ಯವಿಲ್ಲ, ನೀರು, ವಿದ್ಯುತ್, ಬಳಸಿದ್ದರಿಂದ ನೀರಿನ ಉಳಿತಾಯ ಮತ್ತು ವಿದ್ಯುತ್‌ನ ಉತ್ಪಾದನೆ ಉಳಿತಾಯ. ಅಲಂಕಾರವಿಲ್ಲದ್ದರಿಂದ ಕಾಗದ ಬಳಸಲಿಲ್ಲ. ಸರಕು ವಾಹನ / ಆಮಂತ್ರಣ ಹಂಚಿಕೆಗೆ ವಾಹನ ಬಳಸಲಿಲ್ಲ. ಇದರಿಂದಾಗಿ ಪೆಟ್ರೋಲ್ / ಡೀಸಲ್ ಖರೀದಿಸಲಿಲ್ಲ. ಇದರಿಂದಾಗಿ ಪ್ರಾಕೃತಿಕ ಸಂಪತ್ತನ್ನು ಉಳಿಸಿದಂತಾಗಲಿಲ್ಲವೇ. ಇದೆಲ್ಲವೂ ಕೊರೋನಾ ಕೊಡುಗೆಯೇ!!

**ಹೆಚ್.ಟಿ.ನಾಗೇಶ್,**

**ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ**

**ಮಹಾಮಂಡಳ ನಿ., ಬೆಂಗಳೂರು**

## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988, ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ. **– ಸಂಪಾದಕರು**

SAHAKARA VARTHA PATHRIKE KANNADA MONTHLY
RNI-REG NO : KARKAN/2018/75796
POST REG NO : KNBGW-1816/2019-2021
POSTING DATE : 1 & 5. EVERY MONTH
POSTED AT : P/C RMS BHAVAN, BANGALORE PSO,
Blore-26 PUBLISHED ON : 31 TH of Previous Month

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತಮಂಡಳಿ



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು



ಡಾ. ಬಿ.ಡಿ. ಭೂಕಾಂತ
ಉಪಾಧ್ಯಕ್ಷರು



ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು



ಶ್ರೀ ವಿ. ರಾಜು
ನಿರ್ದೇಶಕರು



ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು



ಶ್ರೀ ಎಂ.ಜೆ. ನರೇಂದ್ರ ಕುಮಾರ
ನಿರ್ದೇಶಕರು



ಶ್ರೀ ಡಿ. ಚನ್ನಯ್ಯ
ನಿರ್ದೇಶಕರು



ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು



ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು



ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು



ಶ್ರೀ ಧರೇಪ್ಪ ಎಂ. ಅಲಗೂರ
ನಿರ್ದೇಶಕರು



ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು



ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು



ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು



ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು



ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು



ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು



ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು



ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು



ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು



ಶ್ರೀ ಕೆ.ಎಸ್.ಗುರುಪ್ರಸಾದ್
ಸಲಹೆಗಾರರು



ಶ್ರೀಮತಿ ಪಿ.ಆಶಾಲತಾ
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)

ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು
ನಂ.16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

Printed at : Biligiri Printers
Chamrajpet, Bengaluru - 18.






**ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ**
ಅಧ್ಯಕ್ಷರು

> "ಈ ವರ್ಷವೂ ಹಲವು ಕಾರಣಗಳಿಂದ ಸಂಘಗಳ ಲೆಕ್ಕಪರಿಶೋಧನಾ ವರದಿಗಳನ್ನು ಲೆಕ್ಕಪರಿಶೋಧನಾ ಇಲಾಖೆಗೆ ಆರ್ಥಿಕ ತಃಖ್ತೆಗಳನ್ನು ಸಲ್ಲಿಸಲು ಅವಧಿ ವಿಸ್ತರಿಸಿರುವ ಕಾರಣಗಳಿಂದ 25ನೇ ಡಿಸೆಂಬರ್–2021ರವರೆವಿಗೂ ವಾರ್ಷಿಕ ಮಹಾಸಭೆಗಳನ್ನು ವರ್ಚುಯಲ್ ಮೂಲಕ ನಡೆಸಲು ಸರ್ಕಾರ ಅವಕಾಶ ಕಲ್ಪಿಸಿಕೊಟ್ಟಿದೆ. ಆಧುನಿಕ ತಂತ್ರಜ್ಞಾನದಿಂದ ವರ್ಚುಯಲ್ ಮಹಾಸಭೆಗಳನ್ನು ಏರ್ಪಡಿಸುತ್ತಿರುವುದರಿಂದ ಅರ್ಹ ಸದಸ್ಯರುಗಳು ಹೆಚ್ಚು ಸಂಖ್ಯೆಯಲ್ಲಿ ಮಹಾಸಭೆಗಳಲ್ಲಿ ಭಾಗವಹಿಸಲು ಅವಕಾಶಗಳನ್ನು ಕಲ್ಪಿಸಿ ಕೊಟ್ಟಿರುವುದು ಸ್ವಾಗತಾರ್ಹವಾದುದಾಗಿದೆ."

# ಸಹಕಾರ ಸಂಘಗಳ ವಾರ್ಷಿಕ ಮಹಾಸಭೆ ಅವಧಿ ವಿಸ್ತರಣೆ – ಸ್ವಾಗತಾರ್ಹ

ಕಳೆದ 18 ತಿಂಗಳುಗಳಿಂದ ಕೋವಿಡ್ ಮಹಾಮಾರಿಯ ಸಂಕಷ್ಟದಿಂದ ಇಡೀ ಜಗತ್ತಿನ ಆರ್ಥಿಕ ಚಟುವಟಿಕೆಗಳು ನಿಧಾನಗತಿಯಲ್ಲಿ ಸಾಗುತ್ತಿವೆ. ಕೋಟ್ಯಂತರ ಉದ್ಯೋಗ ನಷ್ಟದಿಂದ ಜನರು ಸಂಕಷ್ಟಗಳ ಸರಮಾಲೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಜನರ ಬೇಡಿಕೆಗಳಿಗೆ ಅನುಗುಣವಾಗಿ ಸಾಲ ನೀಡಿದ ರಾಷ್ಟ್ರೀಕೃತ ಖಾಸಗಿ ಮತ್ತು ಸಹಕಾರ ಬ್ಯಾಂಕುಗಳು/ ಸಂಘಗಳು ನಿಗದಿತ ಅವಧಿಯಲ್ಲಿ ಕಂತು ಸಾಲಗಳು ಮರುಪಾವತಿಯಾಗದ ಕಾರಣಗಳಿಂದಲೂ ಸಂಕಷ್ಟಗಳನ್ನು ಎದುರಿಸುತ್ತಿವೆ. ವಾರ್ಷಿಕ ಮಹಾಸಭೆಗಳು ಕಳೆದ ವರ್ಷ 25ನೇ ಡಿಸೆಂಬರ್‌ವರೆವಿಗೂ ನಡೆದಿದ್ದವು. ಈ ವರ್ಷವೂ ಹಲವು ಕಾರಣಗಳಿಂದ ಸಂಘಗಳ ಲೆಕ್ಕಪರಿಶೋಧನಾ ವರದಿಗಳನ್ನು ಲೆಕ್ಕಪರಿಶೋಧನಾ ಇಲಾಖೆಗೆ ಆರ್ಥಿಕ ತಃಖ್ತೆಗಳನ್ನು ಸಲ್ಲಿಸಲು ಅವಧಿ ವಿಸ್ತರಿಸಿರುವ ಕಾರಣಗಳಿಂದ 25ನೇ ಡಿಸೆಂಬರ್–2021ರವರೆವಿಗೂ ವಾರ್ಷಿಕ ಮಹಾಸಭೆಗಳನ್ನು ವೀಡಿಯೋ ಕಾನ್ಫರೆನ್ಸ್ ಅಥವಾ ವರ್ಚುಯಲ್ ಮೂಲಕ ನಡೆಸಲು ಸರ್ಕಾರ ಅವಕಾಶ ಕಲ್ಪಿಸಿಕೊಟ್ಟಿದೆ. ಆಧುನಿಕ ತಂತ್ರಜ್ಞಾನದಿಂದ ವರ್ಚುಯಲ್ ಮಹಾಸಭೆಗಳನ್ನು ಏರ್ಪಡಿಸುತ್ತಿರುವುದರಿಂದ ಅರ್ಹ ಸದಸ್ಯರುಗಳು ಹೆಚ್ಚು ಸಂಖ್ಯೆಯಲ್ಲಿ ಮಹಾಸಭೆಗಳಲ್ಲಿ ಭಾಗವಹಿಸಲು ಅವಕಾಶಗಳನ್ನು ಕಲ್ಪಿಸಿ ಕೊಟ್ಟಿರುವುದು ಸ್ವಾಗತಾರ್ಹವಾದುದಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಕೆಲವು ಸಹಕಾರ ಸಂಸ್ಥೆಗಳು ಆರ್ಥಿಕವಾಗಿ ಸಧೃಡವಾಗಿದ್ದರೆ ಹಲವು ಸಂಸ್ಥೆಗಳು ಸದಸ್ಯರಿಂದ ಬರಬೇಕಾದ ಸಾಲ ಕಂತುಗಳ ವಿಳಂಬದಿಂದ ಹೆಚ್ಚು ಲಾಭಗಳಿಸುವುದು ಕಷ್ಟಕರವಾಗಿದೆ ಎಂಬ ಅಂಶವನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

ಈ ಬಗ್ಗೆ ಸದಸ್ಯರಲ್ಲಿ ಜಾಗೃತಿ ಮೂಡಿಸಬೇಕಾದ ಅಗತ್ಯವಿದೆ. ಮೊಬೈಲ್ ಎಸ್.ಎಂ.ಎಸ್., ವಾಟ್ಸಪ್ ಸಂದೇಶಗಳ ಮೂಲಕ ಸದಸ್ಯರಿಗೆ ಮಾಹಿತಿಗಳನ್ನು ಕಳುಹಿಸಿ ಸಂಘಗಳಲ್ಲಿ ವ್ಯವಹಾರ ನಡೆಸಲು ಪ್ರೇರಿಪಿಸಬೇಕಾಗಿದೆ. ಈ ಬಗ್ಗೆ ಸಹಕಾರ ಸಂಘಗಳಲ್ಲಿ ಜಾಗೃತಿ ಮೂಡಿಸುವುದು ಅನಿವಾರ್ಯವಾಗಿದೆ. ಇದರಿಂದ ಮುಂದಿನ ದಿನಗಳಲ್ಲಿ ಸಹಕಾರ ಸಂಘಗಳು ಸಧೃಡಗೊಳ್ಳಲು ನೆರವಾಗಬಲ್ಲದು.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಾಧ್ಯಕ್ಷರು / ಕಾರ್ಯನಿರ್ವಾಹಕ ಸಂಪಾದಕರು :
**ಡಾ. ಬಿ.ಡಿ. ಭೂಕಾಂತ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಲಹೆಗಾರರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

## ಸಹಕಾರ ಇಲಾಖೆಯ ಕಾರ್ಯದರ್ಶಿಯಾಗಿ ಎನ್. ಜಯರಾಮ್ ಅಧಿಕಾರ ಸ್ವೀಕಾರ



**ಬೆಂಗಳೂರು** : ಸಹಕಾರ ಇಲಾಖೆಯ ಕಾರ್ಯದರ್ಶಿಯಾಗಿ ಹಿರಿಯ ಐ.ಎ.ಎಸ್. ಅಧಿಕಾರಿ ಎನ್. ಜಯರಾಮ್ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ಇವರು ಈ ಹಿಂದೆ ಸಹಕಾರ ಸಂಘಗಳ ನಿಬಂಧಕರಾಗಿ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾಗಿ ಹಾಗೂ ಸಹಕಾರಿ ಲೆಕ್ಕಪರಿಶೋಧನಾ ಇಲಾಖೆಯ ನಿರ್ದೇಶಕರಾಗಿ ಸೇವೆ ಸಲ್ಲಿಸಿರುವ ಅನುಭವವನ್ನು ಹೊಂದಿರುತ್ತಾರೆ. ಪ್ರಸ್ತುತ ಬೆಂಗಳೂರು ಜಲಮಂಡಳಿಯ ಅಧ್ಯಕ್ಷರಾಗಿ, ಮೈಸೂರು ಜಿಲ್ಲಾ ಅಭಿವೃದ್ಧಿ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

## 17ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸ್

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಇದರ 17ನೇ ವಾರ್ಷಿಕ ಸಾಮಾನ್ಯ ಸಭೆಯನ್ನು 21ನೇ ಸೆಪ್ಟಂಬರ್–2021 ಮಂಗಳವಾರ ಕರ್ನಾಟಕ ಸರ್ಕಾರ ಆದೇಶ ಸಂಖ್ಯೆ: ಸಇ 60 ಸಿಎಎಲ್‌ಎಮ್ 2021 (ಇ)ಬೆಂಗಳೂರು ದಿನಾಂಕ : 04.08.2021 ಆದೇಶದಂತೆ ವಾರ್ಷಿಕ ಸಾಮಾನ್ಯ ಸಭೆಯನ್ನು ವಿಡಿಯೋ ಕಾನ್ಫರೆನ್ಸ್ / ವರ್ಚುಯಲ್ ಮೀಟಿಂಗ್ ಮೂಲಕ ಝೂಮ್ ವಿಡಿಯೋ ವೆಬಿನಾರ್ ತಂತ್ರಜ್ಞಾನವನ್ನು ಬಳಸಿಕೊಂಡು ಬೆಂಗಳೂರಿನಲ್ಲಿ ಬೆಳಗ್ಗೆ 11.00 ಘಂಟೆಗೆ ಕರೆಯಲಾಗಿದೆ. ಈ ಸಭೆಯಲ್ಲಿ ಮಾನ್ಯ ಸದಸ್ಯ ಸಹಕಾರ ಸಂಘಗಳು ತಮ್ಮ ಸಹಕಾರ ಸಂಘ ಇರುವ ಸ್ಥಳದಿಂದಲೇ ಕಂಪ್ಯೂಟರ್/ಲ್ಯಾಪ್‌ಟಾಪ್‌ಗಳ ಮೂಲಕ ಹಾಜರಿರಲು ಕೋರಿದೆ.

ಈ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಅರ್ಹ ಸಹಕಾರ ಸಂಘಗಳ ಡೆಲಿಗೇಟುಗಳು ತಮ್ಮ ಹೆಸರು, ಇಮೇಲ್ ಐಡಿ, ವಾಟ್ಸ್‌ಪ್ ಮೊಬೈಲ್ ಸಂಖ್ಯೆಯನ್ನು ದಿನಾಂಕ : 17.09.2021 ರೊಳಗಾಗಿ ಮಹಾಮಂಡಳಕ್ಕೆ ಇಮೇಲ್ ಅಥವಾ ಅಂಚೆ ಮೂಲಕ ತಲುಪುವಂತೆ ಕಳುಹಿಸಲು ಕೋರಿದೆ. ನೋಟೀಸು ತಲುಪದ ಅರ್ಹ ಸಹಕಾರ ಸಂಘಗಳು ಈ ಪ್ರಕಟಣೆಯನ್ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು ಎಂದು ಪರಿಗಣಿಸಿ ಸಭೆಯಲ್ಲಿ ಹಾಜರಿರಲು ಕೋರಿದೆ.

ಸಹಿ/–
(ಆಶಾಲತಾ.ಪಿ)
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)

**ಸುಭಾಷಿತ :** ಪರಿಹರಿಸಬಹುದಾದ ಸಂಗತಿಯಾದರೆ ಚಿಂತಿಸುವ ಅಗತ್ಯವಿಲ್ಲ; ಪರಿಹರಿಸಲು ಅಸಾಧ್ಯವಾದುದಾದರೆ ಅದಕ್ಕಾಗಿ ಚಿಂತಿಸುವುದರಿಂದ ಪ್ರಯೋಜನವಿಲ್ಲ. – ದಲೈಲಾಮ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಪಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಸಮೃದ್ಧ ಭಾರತಕ್ಕೆ ಅಭಿವೃದ್ಧಿ ಮಂತ್ರ ಕೆಂಪು ಕೋಟೆಯಲ್ಲಿ ಪ್ರಧಾನಿ ಭಾಷಣ : ಮೂಲಸೌಕರ್ಯಕ್ಕೆ ರೂ. 100 ಲಕ್ಷ ಕೋಟಿ : ಉದ್ಯೋಗ ಸೃಷ್ಟಿಗೆ ಆದ್ಯತೆ



ನವದೆಹಲಿ : ರಾಷ್ಟ್ರ ರಾಜಧಾನಿ ನವದೆಹಲಿಯ ಕೆಂಪುಕೋಟೆ ಮೇಲೆ ಆಗಸ್ಟ್ 15 ರಂದು ಧ್ವಜಾರೋಹಣ ನೆರವೇರಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಉದ್ಯೋಗಾವಕಾಶ ಸೃಷ್ಟಿಗೆ 100 ಕೋಟಿ ರೂ.ಗಳ ವೆಚ್ಚದ ಗತಿಶಕ್ತಿ ಕಾರ್ಯಕ್ರಮ ಸೇರಿದಂತೆ ಹಲವು ಜನಕಲ್ಯಾಣ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಘೋಷಿಸಿದ್ದಾರೆ.

ರಾಜಕೀಯ ಸುಧಾರಣೆಗೆ ಭಾರತ ತೋರಿಸಿರುವ ರಾಜಕೀಯ ಇಚ್ಛಾಶಕ್ತಿಯನ್ನು ಇಡೀ ವಿಶ್ವವೇ ಗುರುತಿಸಿದೆ. ದಾಖಲೆ ಪ್ರಮಾಣದ ವಿದೇಶಿ ಬಂಡವಾಳವೂ ಬಂದಿದೆ ಎಂದರು. ಗತಿಶಕ್ತಿ ಯೋಜನೆ ಮೂಲಕ ಮೂಲಸೌಕರ್ಯಗಳ ಅದರಲ್ಲೂ ಮುಖ್ಯವಾಗಿ ರಸ್ತೆಗಳ ಅಭಿವೃದ್ಧಿ ಮಾಡಲಾಗುವುದು. ಇದು ಇನ್ನಷ್ಟು ಆರ್ಥಿಕ ವಲಯಗಳ ಅಭಿವೃದ್ಧಿಗೆ ಅವಕಾಶ ಮಾಡಿಕೊಡಲಿದೆ ಎಂದರು.

ಬಡವರಿಗೆ ಉತ್ತಮ ಗುಣಮಟ್ಟದ ಅಕ್ಕಿ ನೀಡುವುದಾಗಿ ಪ್ರಕಟಿಸಿದ ಅವರು, ಪಡಿತರ ಅಂಗಡಿಯಲ್ಲಿ ಸಿಗುವ ಅಕ್ಕಿ ಇರಲಿ, ಮಧ್ಯಾಹ್ನ ಊಟಕ್ಕೆ ನೀಡುತ್ತಿರುವ ಅಕ್ಕಿಯ ಗುಣಮಟ್ಟವನ್ನು 2024ರ ವೇಳೆಗೆ ಹೆಚ್ಚಿಸುವ ಗುರಿ ಹೊಂದಲಾಗಿರುವುದಾಗಿ ಪ್ರಕಟಿಸಿದರು.

ರಾಷ್ಟ್ರೀಯ ಜಲಜನಕ ಆಯೋಗ ಸ್ಥಾಪಿಸುವ ಮತ್ತೊಂದು ಯೋಜನೆ ಪ್ರಕಟಿಸಿದ್ದು, ಈ ಮೂಲಕ ದೇಶವನ್ನು ಇಂಗಾಲ ಮುಕ್ತ ಜಲಜನಕದ ಜಾಗತಿಕ ರಫ್ತುದಾರ ದೇಶವನ್ನಾಗಿ ಮಾಡುವ ಗುರಿ ಹೊಂದಿರುವುದಾಗಿ ತಿಳಿಸಿದರು. ದೇಶವನ್ನು 2047ರ ಹೊತ್ತಿಗೆ ಇಂಧನದಲ್ಲಿ ಸ್ವಾವಲಂಬಿಯನ್ನಾಗಿ ಮಾಡುವುದಾಗಿ ತಿಳಿಸಿದರು.

ಸಂವಿಧಾನ ತಿದ್ದುಪಡಿ ಕಾಯ್ದೆ ಮೂಲಕ ಇತರೆ ಹಿಂದುಳಿದ ವರ್ಗಗಳ ಪಟ್ಟಿಯನ್ನು ಸಿದ್ಧಪಡಿಸಲು ರಾಜ್ಯ ಸರ್ಕಾರಗಳಿಗೆ ಅವಕಾಶ ನೀಡಿರುವುದಾಗಿ ತಿಳಿಸಿದ ಅವರು, ದಲಿತರು, ಹಿಂದುಳಿದವರು, ಬುಡಕಟ್ಟು ಜನಾಂಗದವರು ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ನೆರವಿನ ಬೆಂಬಲ ನೀಡುವುದು ಅತ್ಯಗತ್ಯ ಎಂದು ತಮ್ಮ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಿದರು.

ಜಲಜೀವನ್ ಮಿಷನ್ ಅಡಿಯಲ್ಲಿ 2024ರ ಹೊತ್ತಿಗೆ ದೇಶದ ಎಲ್ಲ ಮನೆಗಳಿಗೆ ನಲ್ಲಿ ನೀರು ಒದಗಿಸುವುದಾಗಿ ಹೇಳಿದ ಅವರು, ಕಳೆದೆರಡು ವರ್ಷಗಳಲ್ಲಿ ನಾಲ್ಕೂವರೆ ಕೋಟಿ ಮನೆಗಳಿಗೆನಲ್ಲಿ ಸಂಪರ್ಕ ಕಲ್ಪಿಸಲಾಗಿದೆ ಎಂದರು.

ಸ್ವಸಹಾಯ ಗುಂಪುಗಳು ತಯಾರಿಸುವ ವಸ್ತುಗಳ ಮಾರಾಟಕ್ಕಾಗಿ ಸರ್ಕಾರ ಒಂದು ಇ–ಕಾಮರ್ಸ್ ವೇದಿಕೆಯನ್ನು ಒದಗಿಸಲಿದೆ. ಇದರಿಂದ ಗ್ರಾಮೀಣ ಪ್ರದೇಶದಲ್ಲೂ ಡಿಜಿಟಲ್ ಉದ್ಯಮಿಗಳು ರೂಪುಗೊಳ್ಳಲಿದ್ದಾರೆ ಎಂದರು. 2021ರ ಮಾರ್ಚ್12ರಿಂದ 2023ರ ಆಗಸ್ಟ್ 15ರವರೆಗೂ 'ಅಮೃತ ಮಹೋತ್ಸವ' ನಡೆಯಲಿದೆ.


## ಆಯ್ಕೆ



ಶ್ರೀ ಕನಕ ಪತ್ತಿನ ಸಹಕಾರ ಸಂಘ ನಿ., ಕೋತಿತೋಪು ತುಮಕೂರು ಜಿಲ್ಲೆ ಇದರ ಆಡಳಿತಮಂಡಳಿಯ ನೂತನ ಅಧ್ಯಕ್ಷರಾಗಿ ಟಿ.ಇಂದ್ರಕುಮಾರ್ ಹಾಗೂ ಉಪಾಧ್ಯಕ್ಷರಾಗಿ ಕೆ ಯೋಗೀಶ್ ಅವರುಗಳು ಆಯ್ಕೆಯಾಗಿರುತ್ತಾರೆ. ಶ್ರೀಯುತರನ್ನು ಆಡಳಿತಮಂಡಳಿ ನಿರ್ದೇಶಕರು ಅಧಿಕಾರಿ/ಸಿಬ್ಬಂದಿ ವರ್ಗದವರು ಅಭಿನಂದಿಸಿ ಶುಭ ಕೋರಿದರು.

## 75ನೇ ಭಾರತ ಸ್ವಾತಂತ್ರ್ಯೋತ್ಸವ

# ನವಕರ್ನಾಟಕ ನಿರ್ಮಾಣಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಮೃತಸೂತ್ರ



ಬೆಂಗಳೂರು : ಮುಖ್ಯಮಂತ್ರಿಯಾಗಿ ಬಸವರಾಜ ಬೊಮ್ಮಾಯಿ ಅವರು, ಕರ್ನಾಟಕದ ನವನಿರ್ಮಾಣದ ಸಂಬಂಧ ತಮ್ಮ ಕನಸನ್ನು ಅಮೃತ ಸೂತ್ರಗಳ ಮೂಲಕ ನಾಡಿನ ಜನರ ಮುಂದಿಟ್ಟಿದ್ದಾರೆ.

ಭಾರತ ಸ್ವಾತಂತ್ರ್ಯ ಬಂದು 75 ವರ್ಷಗಳಾಗಿರುವ ಹಿನ್ನೆಲೆಯಲ್ಲಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ನೆನಪಿಗಾಗಿ 11 ಯೋಜನೆಗಳನ್ನು ಪ್ರಕಟಿಸಿದ್ದು ಈ ಯೋಜನೆಗಳ ಮುಖಾಂತರ ನವಕರ್ನಾಟಕದ ಕನಸನ್ನು ಕಾಣುತ್ತಿರುವ ಮುಖ್ಯಮಂತ್ರಿಗಳು ರಾಷ್ಟ್ರಪಿತ ಮಹಾತ್ಮ ಗಾಂಧೀ ಅವರ ಗ್ರಾಮಸ್ವರಾಜ್ ನನಸಿಗೆ ನೀರೆರೆಯುವ ಸಂಕಲ್ಪ ಮಾಡಿದ್ದಾರೆ.

ಫೀಲ್ಡ್ ಮಾರ್ಷಲ್ ಮಾಣಿಕ್ ಶಾ ಮೈದಾನದಲ್ಲಿ ಆಗಸ್ಟ್ 15 ರಂದು ಆಯೋಜಿಸಲಾಗಿದ್ದ ಸ್ವಾತಂತ್ರ್ಯೋತ್ಸವ ಸಂಭ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ನಿರರ್ಗಳವಾಗಿ ಭಾಷಣ ಮಾಡಿದ ಅವರು, ಮುಂದಿನ ಇಪ್ಪತ್ತು ತಿಂಗಳಿನವರೆಗೂ ನಮ್ಮ ಸರ್ಕಾರ ಆಸ್ತಿತ್ವದಲ್ಲಿ ಇರಲಿದ್ದು, ಈ ಅವಧಿಯೊಳಗೆ ನೂತನ ಕಾರ್ಯಕ್ರಮಗಳ ಮೂಲಕ ರಾಜ್ಯದ ಮೂಲೆ ಮೂಲೆಗೂ ತಲುಪಿ ಇಂದಿನಿಂದಲೇ ನವ ಕರ್ನಾಟಕ ನಿರ್ಮಾಣ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶಪಥ ಮಾಡಿದರು.

ಹಿಂದುಳಿದ, ದಲಿತರು, ಅಲ್ಪಸಂಖ್ಯಾತರು, ಮಹಿಳೆಯರು ಸೇರಿದಂತೆ ಕನ್ನಡ ನಾಡಿನ ಪ್ರತಿಯೊಂದು ಕುಟುಂಬವೂ ಬೆಳವಣಿಗೆ ಆಗಬೇಕು. ಪ್ರತಿಯೊಬ್ಬರ ಬದುಕು ಹಸನಾಗಬೇಕು. ಎಲ್ಲ ಯೋಜನೆಗಳು ಪ್ರತಿಯೊಬ್ಬರಿಗೂ ತಲುಪಬೇಕೆಂಬ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದೆಂದು ಭರವಸೆ ನೀಡಿದರು.

ಹೊಸ ಚಿಂತನೆ, ಹೊಸ ದಾರಿ, ಹೊಸ ದಿಕ್ಸೂಚನೆ, ಮಾನವ ಸಂಪನ್ಮೂಲ ಬಳಸಿಕೊಂಡು, ಹೊಸ ತಂತ್ರಜ್ಞಾನ ಬಳಕೆ ಮಾಡಿ, ವೈಜ್ಞಾನಿಕವಾಗಿ ಕೃಷಿ, ಸೇವಾ ವಲಯವನ್ನು ಮಾಡಲು ಸಂಕಲ್ಪ ಮಾಡಿದ್ದೇವೆ. ನಾಡಿನ ಕೊನೆ ಹಂತದ ಜನತೆಗೆ ನಮ್ಮ ಕಾರ್ಯಕ್ರಮ ಮುಟ್ಟುವವರೆಗೂ ನಮ್ಮ ಕೆಲಸ ಮಾಡುತ್ತೇವೆ. ರೈತ ವಿದ್ಯಾನಿಧಿ ಕಾರ್ಯಕ್ರಮವನ್ನು ಘೋಷಿಸಿದ್ದೇವೆ. ರೈತರ ಮಕ್ಕಳಿಗೆ ಉನ್ನತ ಶಿಕ್ಷಣಕ್ಕೆ ವಾರ್ಷಿಕ 2500 ರೂ.ಗಳಿಂದ 11 ಸಾವಿರ ರೂ. ವರೆಗೆ ವಿದ್ಯಾರ್ಥಿ ವೇತನ ನೀಡಲು ಆದೇಶ ಮಾಡಿದ್ದೇನೆ. ಇದರಿಂದ 17 ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲ ಆಗಲಿದೆ ಎಂದು ಹೇಳಿದರು.

ರಾಜ್ಯದ ಜಿಲ್ಲಾಧಿಕಾರಿ, ತಾಲ್ಲೂಕು ಸೇರಿದಂತೆ ಇನ್ನಿತರೆ ಸರ್ಕಾರಿ ಕಚೇರಿಗಳಲ್ಲಿ ಕಾಗದ ರಹಿತ ಕಚೇರಿ ಆಸ್ತಿತ್ವಕ್ಕೆ ತರುವ ಕನಸು ಹೊಂದಿದ್ದೇನೆ ಎಂದು ಭರವಸೆ ನೀಡಿದರು. ನಾಡು ಕಟ್ಟುವಲ್ಲಿ ತಾಯಂದಿರ ಶಕ್ತಿ ಅಪಾರ ಇದೆ. ಅವರಿಗೆ ಮೊದಲ ಆದ್ಯತೆ ನಮ್ಮ ಸರಕಾರ ನೀಡಲಿದೆ.

ಎಸ್ಸಿ–ಎಸ್ಟಿ ಮಹಿಳೆಯರ ಜೊತೆಗೆ ಸ್ತ್ರೀಶಕ್ತಿಯನ್ನು ಬಲಪಡಿಸುವ ಕೆಲಸ ಮಾಡಲಾಗುವುದು. ಅದೇ ರೀತಿ, ಕೈಗಾರಿಕೆಯಲ್ಲಿ ರಾಜ್ಯವನ್ನು ದೇಶದಲ್ಲಿಯೇ ಮೊದಲ ಸ್ಥಾನಕ್ಕೆ ತರಲು ಪ್ರಯತ್ನ ಮಾಡಲಾಗುವುದು. ದೇಶಿ ಮತ್ತು ವಿದೇಶಿ ಬಂಡವಾಳ ತಂದು ಯುವಕರಿಗೆ ಉದ್ಯೋಗ ಒದಗಿಸುವ ಕೆಲಸ ಮತ್ತು ಸ್ಟಾರ್ಟ್ ಆಪ್‌ಗಳಿಗೆ ಅನುಕೂಲಕರ ವಾತಾವರಣ ನಿರ್ಮಾಣ ಮಾಡಲಾಗುವುದು ಎಂದು ಬೊಮ್ಮಾಯಿ ಘೋಷಿಸಿದರು.

### ಹೊಸ ಯೋಜನೆಗಳು

1. ಅಮೃತ ಗ್ರಾಮ ಪಂಚಾಯ್ತಿಗಳು
2. ಅಮೃತ ಗ್ರಾಮೀಣ – ವಸತಿ ಯೋಜನೆ
3. ಅಮೃತ ರೈತ – ಉತ್ಪಾದಕ ಸಂಸ್ಥೆಗಳು
4. ಅಮೃತ ಶಾಲಾ – ಸೌಲಭ್ಯ ಯೋಜನೆ
5. ಅಮೃತ ನಿರ್ಮಲ ನಗರ
6. ಅಮೃತ ಅಂಗನವಾಡಿಗಳು
7. ಅಮೃತ ಸ್ವಸಹಾಯ ಕಿರು ಉದ್ದಿಮೆಗಳು
8. ಅಮೃತ ಸಮುದಾಯ ಅಭಿವೃದ್ಧಿ ಯೋಜನೆ
9. ಅಮೃತ ಆರೋಗ್ಯ ಮೂಲಸೌಕರ್ಯ – ಉನ್ನತೀಕರಣ ಯೋಜನೆ
10. ಅಮೃತ ಕೌಶಲ್ಯ ತರಬೇತಿ ಯೋಜನೆ
11. ಅಮೃತ ಕ್ರೀಡಾ ದತ್ತು ಯೋಜನೆ

# ದೇವರಾಜ ಅರಸು ಕಾಲದ ಭೂಸುಧಾರಣೆ ಕಾಯ್ದೆ ನಮಗೆಲ್ಲರಿಗೂ ಸ್ಫೂರ್ತಿದಾಯಕ : ಬಸವರಾಜ ಬೊಮ್ಮಾಯಿ

**ಬೆಂಗಳೂರು** : ದೇವರಾಜ ಅರಸು ಕಾಲದಲ್ಲಿ ಜಾರಿಗೊಂಡಿರುವ ಭೂಸುಧಾರಣೆ ಕಾಯ್ದೆ ನಮಗೆಲ್ಲರಿಗೂ ಸ್ಫೂರ್ತಿದಾಯಕ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ದೇವರಾಜ ಅರಸು ಅವರ 106 ನೇ ಜನ್ಮ ದಿನಾಚರಣೆ ಅಂಗವಾಗಿ ನಡೆದ ಕಾರ್ಯಕ್ರಮದ ಬಳಿಕ ಮಾತನಾಡಿದ ಅವರು, ಅವರ ಪ್ರತಿಯೊಂದು ಜನ್ಮ ದಿನಾಚರಣೆ ನಮಗೆ ಸ್ಫೂರ್ತಿ, ನಮ್ಮ ಬದ್ಧತೆಯನ್ನು ಪುನರುಚ್ಚಾರ ಮಾಡುವ ದಿನ ಎಂದರು.

ಹಿಂದುಳಿದ ವರ್ಗಗಳ ಏಳಿಗೆ ಹಾಗೂ ಅವರ ಸ್ವಾಭಿಮಾನದ ಬದುಕಿಗಾಗಿ ಸರ್ಕಾರ ನಿತ್ಯ ಕೆಲಸ ಮಾಡಲಿದೆ. ಹಿಂದುವಳಿಗೆ ವರ್ಗಗಳ ಯುವಕರ ಶಿಕ್ಷಣ ಹಾಗೂ ಉದ್ಯೋಗಕ್ಕೆ ಹೆಚ್ಚಿನ ಆದ್ಯತೆ ನೀಡುವ ಸಂಕಲ್ಪ ಮಾಡುವ ದಿನ ಇದಾಗಿದೆ ಎಂದು ತಿಳಿಸಿದರು.



ರಾಜ್ಯದ ಮುಖ್ಯಮಂತ್ರಿಯಾಗಿ ಅತೀ ದೀರ್ಘಕಾಲ ಆಡಳಿತ ನಡೆಸಿ, ಸಮಾಜದ ಹಿಂದುಳಿದ ವರ್ಗದವರು, ದಲಿತರು ಮತ್ತು ಬಡವರನ್ನು ಜಾಗೃತಿಗೊಳಿಸಿ, ಅವರು ಕನಸು ಮನಸಿನಲ್ಲೂ ನೆನೆಸಲಾಗದಿದ್ದ ಅಧಿಕಾರದ ಅರಮನೆಗೆ ಕರೆದುಕೊಂಡು ಹೋದ ಮುತ್ಸದ್ದಿ. ಹೀಗಾಗಿ ಅವರು ಈ ರಾಜ್ಯದ, ಈ ದೇಶದ ಹಿಂದುಳಿದ ವರ್ಗಗಳ, ದಲಿತರ, ಬಡವರ ಮನಸ್ಸಿನಲ್ಲಿ ಎಂದೆಂದಿಗೂ ಚಿರಸ್ಥಾಯಿಯಾಗಿದ್ದಾರೆ ಅಸಾಧ್ಯವಾದ ಸಾಧನೆಗಳನ್ನು ಮೌನವಾಗಿ ಮಾಡಿ ತೋರಿಸಿದ ಡಿ.ದೇವರಾಜ ಅರಸ್ ಅವರನ್ನು "ಮೌನಕ್ರಾಂತಿಯ ಹರಿಕಾರ" ಎಂದೂ ಕರೆಯುತ್ತಾರೆ.

ಡಿ.ದೇವರಾಜ ಅರಸು ಅವರು ಕರ್ನಾಟಕ ರಾಜ್ಯದ ಎಂಟನೇ ಮುಖ್ಯಮಂತ್ರಿಯಾಗಿ ಎರಡು ಅವಧಿ ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದಿದ್ದರು. 1972 ರಿಂದ 1977 ಮೊದಲ ಅವಧಿ ಮತ್ತು 1978 ರಿಂದ 1980 ರವರೆಗೆ ಎರಡನೇ ಅವಧಿಯಲ್ಲಿ ಅರಸು ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು.

ಕುಟುಂಬದ ಹಿನ್ನಲೆ: ದೇವರಾಜ ಅರಸು ಅವರ ತಂದೆಯ ಹೆಸರು ಕೂಡ ದೇವರಾಜ ಅರಸು. ತಾಯಿಯ ಹೆಸರು ದೇವಿರಮ್ಮಣ್ಣಿ. ತಾಯಿಯ ತಂದೆ ಪದ್ಮರಾಜೇ ಅರಸು ಅವರಿಗೆ ಗಂಡು ಮಕ್ಕಳು ಇರಲಿಲ್ಲ. ಆ ಕಾರಣ ಮದುವೆಯ ನಂತರ ಅವರು ಅಳಿಯನನ್ನು ಕೃಷಿಯ ಉಸ್ತುವಾರಿಗಾಗಿ ಕಲ್ಲಹಳ್ಳಿಗೆ ಕರೆಸಿಕೊಂಡರು. ದೇವರಾಜ ಅರಸು ಮತ್ತು ದೇವಿರಮ್ಮಣ್ಣಿ ಅವರಿಗೆ ಇಬ್ಬರು ಗಂಡು ಮಕ್ಕಳು. ದೇವರಾಜ ಅರಸು ಮತ್ತು ಕೆಂಪರಾಜೇ ಅರಸು.

ದೇವರಾಜ ಅರಸು ಅವರ ಆರಂಭಿಕ ಶಿಕ್ಷಣ ಮೈಸೂರಿನ ಬೋರ್ಡಿಂಗ್ ಶಾಲೆಯಲ್ಲಿ ನಡೆಯಿತು. ಅದಾದ ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವಿಜ್ಞಾನ–ಬಿಎಸ್ಸಿ ಪದವಿ ಪಡೆದ ದೇವರಾಜ







ಅರಸು ಅವರು ಕಲ್ಲಹಳ್ಳಿಗೆ ಹಿಂತಿರುಗಿ ಕೃಷಿ ಮತ್ತು ಹೈನುಗಾರಿಕೆಯಲ್ಲಿ ನಿರತರಾದರು.


ಅವರು ಈ ನಾಡಿನ ಮಹಾನ್ ಚೇತನಗಳಲ್ಲಿ ಮೇಲ್ಪಂಕ್ತಿಯಲ್ಲಿ ನಿಲ್ಲುತ್ತಾರೆ.

### ವೃದ್ಧರಿಗೆ ನೆಮ್ಮದಿ ನೀಡಲು ಮಾಸಾಶನ :

ಅರಸು ಅವರು ಮಹಾ ಮಾನವತಾ ವಾದಿಯಾಗಿದ್ದರು, ಸಂಕಷ್ಟದಲ್ಲಿರುವವರನ್ನು ಕಂಡರೆ ಮರುಗುವ ಹೆಂಗರುಳು. ಸಮಾಜದ ಕಟ್ಟಕಡೆಯ ವ್ಯಕ್ತಿಯ ಬಗ್ಗೆ ನಿಸ್ಸಾಹಾಯಕರ ಬಗ್ಗೆ ಅನುಕಂಪ ಹೊಂದಿದ್ದ ಅವರು ಬದುಕಿನ ಸಂಧ್ಯಾಕಾಲದಲ್ಲಿ ಅನಾದರಣೆಗೆ ತುತ್ತಾಗುವ ವೃದ್ಧರಿಗೆ ನೆಮ್ಮದಿ ನೀಡಲು 40 ರೂ.ಗಳ ಮಾಸಾಶನ ನೀಡಿ ವೃದ್ಧಾಪ್ಯ ವೇತನ ಜಾರಿಗೆ ತಂದ ಹೆಗ್ಗಳಿಗೆ ಇವರದಾಗಿದೆ.

ಅಂಗವಿಕಲರು ಮತ್ತು ಅನಾಥರಿಗೆ ಆರ್ಥಿಕ ನೆರವು ನೀಡಿದರು. ಅಕ್ಷರ ಕಲಿತು ಪದವಿ ಪಡೆದ ಲಕ್ಷಾಂತರ ನಿರುದ್ಯೋಗಿ ಪದವೀಧರರ ಬಾಳಿನ ನಿರಾಸೆಯನ್ನು ದೂಡಲು ಸ್ಟೈಫಂಡರಿ ಯೋಜನೆ ಜಾರಿಗೆ ತಂದರು. ಗ್ರಾಮಾಂತರ ಮಕ್ಕಳ ಆರೋಗ್ಯ ರಕ್ಷಣೆಗೆ ಪೌಷ್ಟಿಕ ಆಹಾರ ಯೋಜನೆ, ದುರ್ಬಲ ಮತ್ತು ಹಿಂದುಳಿದ ವರ್ಗಗಳಿಗೆ ಉಚಿತ ನಿವೇಶನ, ಮತ್ತು ಕಡಿಮೆ ವೆಚ್ಚದ ಮನೆ ನಿರ್ಮಾಣ ಯೋಜನೆ "ಭಾಗ್ಯಜ್ಯೋತಿ" ಯೋಜನೆ ಮೂಲಕ ದುರ್ಬಲರ ಮನೆಗಳ ದೀಪ ಬೆಳಗಿಸಿದರು.

ದುರ್ಬಲ ವರ್ಗದವರಲ್ಲಿ ಸ್ವಾಭಿಮಾನದ ಕಲ್ಪನೆ ಹುಟ್ಟಿಸಿ ಅವರಿಗೆ ಆರ್ಥಿಕ ಸ್ವಾವಲಂಬನೆ ಒದಗಿಸಿದ ಅರಸು



### ಸಹಕಾರ ಸಂಘಗಳ ಸ್ಥಾಪನೆ :

ಬಡವರ ನೆರವಿಗಾಗಿ ಸಹಕಾರ ಸಂಘಗಳನ್ನು ಸ್ಥಾಪಿಸಲು ಒತ್ತು ನೀಡಿದ್ದರು. ನಮ್ಮ ನಾಡಿನ ಸಾಮಾಜಿಕ, ಶಿಕ್ಷಣ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಪರಿವರ್ತನೆಯ ಬಯಕೆಯನ್ನು ಪ್ರಜ್ಞಾಪೂರ್ವಕವಾಗಿ ಸೃಷ್ಟಿಸಿದವರು ದಿ. ಡಿ. ದೇವರಾಜ ಅರಸರು ಅವರು. ಕನ್ನಡನಾಡಿನ ಜನಜೀವನದ ಮೇಲೆ ಬೀರಿದ ಮೇರು ಪ್ರಭಾವ ನಿರಂತರ ಸ್ಮರಣೆಯೋಗ್ಯ ಎಂಟು ವರ್ಷಗಳ ಸುದೀರ್ಘಕಾಲ ಕರ್ನಾಟಕದ ಮುಖ್ಯಮಂತ್ರಿಯಾಗಿ ಅಧಿಕಾರದ ಚುಕ್ಕಾಣಿ ಹಿಡಿದಿದ್ದ ಅರಸು ಇಟ್ಟ ದಿಟ್ಟ ಹೆಜ್ಜೆಗಳು ಭವಿಷ್ಯದ ಜನಾಂಗವನ್ನೇ ಬದಲಾಯಿಸಲು ನಾಂದಿಯಾಯಿತು.

### ಬದ್ಧತೆಯ ರಾಜಕಾರಣಿ :

ಸಾಮಾಜಿಕ ಕಾಳಿಜಿಯುಳ್ಳ ದಕ್ಷತೆ ಹಾಗೂ ಬದ್ಧತೆಯ ರಾಜಕಾರಣಿಗಳಲ್ಲಿ ಒಬ್ಬರಾಗಿದ್ದ ದೇವರಾಜ ಅರಸರು ಸಮಾಜವಾದವನ್ನು ಕೇವಲ ಹೇಳಿಕೆಗೆ ನಿಲ್ಲಿಸಲಿಲ್ಲ ಅದನ್ನು ಅನುಷ್ಠಾನಕ್ಕೆ ತಂದರು. ಸಮಾಜದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದವರಿಗೆ ಆರ್ಥಿಕ ಮತ್ತು ಸಾಮಾಜಿಕ ಚೈತನ್ಯ ಕೂಡುವಲ್ಲಿ ಅರಸರು ರೂಪಿಸಿ, ಜಾರಿಗೊಳಿಸದ ಕಾರ್ಯಕ್ರಮ ಯೋಜನೆಗಳು ಹಲವಾರು. ಇಡೀ ದೇಶವೇ ನಿಬ್ಬೆರವಾಗುವಂತೆ ಭೂ ಸುಧಾರಣಾ ಕಾಯ್ದೆಯನ್ನು ಕರ್ನಾಟಕದಲ್ಲಿ ಜಾರಿಗೊಳಿಸಿ ದಿಟ್ಟ ಹೆಜ್ಜೆ ಇಟ್ಟವರು ಅರಸರು.

ಬಡವರ ಬದುಕಿನಲ್ಲಿ ಹೊಸ ಭರವಸೆ ತಂದುಕೊಟ್ಟ ಡಿ ದೇವರಾಜ ಅರಸು ಕರ್ನಾಟಕದಲ್ಲಿ ಆರ್ಥಿಕ, ಸಾಮಾಜಿಕ ಆಂದೋಲನದ ಮೂಲಕ ಹಲವಾರು ಜನಹಿತ ಯೋಜನೆಗಳನ್ನು ಅನುಷ್ಠಾನಗೊಳಿಸುವುದರಲ್ಲಿ ಯಶಸ್ಸು ಸಾಧಿಸಿದರು. ಕರ್ನಾಟಕ ಸರ್ವಾಂಗೀಣ ಬೆಳವಣಿಗೆ ಸಾಧಿಸಲು ಶ್ರಮಿಸಿದ ದೇವರಾಜ ಅರಸರು ಸಮಾಜ ಪರಿವರ್ತನೆಯ ಹರಿಕಾರರಾಗಿದ್ದಾರೆ.

**– ಎಂ. ಮಹೇಶ್‌ಕುಮಾರ್**

# ಗ್ರಾಮೀಣ ಜನರ ಮನೆ ಬಾಗಿಲಿಗೆ ವಿಶಿಷ್ಟ ಸೇವೆ
# ಸಂಶಿ ಅರ್ಬನ್ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ

ದೇಶದಲ್ಲಿ ಸಹಕಾರ ಕ್ಷೇತ್ರ ಬೃಹತ್ತಾಗಿ ಬೆಳೆದಿದೆ. ಗ್ರಾಮೀಣರ ಆರ್ಥಿಕ ಅಭಿವೃದ್ಧಿ ಸಹಕಾರಿ ರಂಗದ ಮುಖ್ಯ ಗುರಿಯಾಗಿದ್ದು, ಸಾಮಾಜಿಕ ಸೇವೆ ಸೇರಿದಂತೆ ಗ್ರಾಮೀಣ ಭಾಗದ ಸಂಪೂರ್ಣ ಅಭಿವೃದ್ಧಿಯ ಕಡೆಗೆ ಸಹಕಾರ ಸಂಘಗಳು ಕೈಜೋಡಿಸುತ್ತಿರುವುದು ಹೆಮ್ಮೆಯ ವಿಷಯ. ಇಂತಹ ಸಹಕಾರ ಸಂಘಗಳಲ್ಲಿ ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಸಂಶಿ ಗ್ರಾಮದ ಸಂಶಿ ಅರ್ಬನ್ ಕೋ-ಆಪರೇಟಿವ್ ಸೊಸೈಟಿ ಕೂಡಾ ಒಂದಾಗಿದ್ದು ಜನರ ಮೆಚ್ಚುಗೆಗೆ ಪಾತ್ರವಾಗಿದೆ.

ಸಂಶಿ ಗ್ರಾಮದಲ್ಲಿ ಜನ್ಮತಾಳಿದ ಸಂಘವು ಸಹಕಾರ ಕ್ಷೇತ್ರದಲ್ಲಿ ಸಾಮಾನ್ಯ ವ್ಯವಹಾರ ನಿರ್ವಹಣೆ ಜೊತೆಗೆ ಸಂಚಾರಿ ವ್ಯಾನ್‌ನಲ್ಲಿ ಬ್ಯಾಂಕಿಂಗ್ ವ್ಯವಹಾರ, ಚಿನ್ನಾಭರಣ ಯೋಜನೆ (ಆಭರಣ ಖರೀದಿ ಸಾಲ), ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಂಬಳ ವಿತರಿಸುವಂತಹದ್ದು ಹಾಗೂ ಗ್ರಾಮೀಣ ಪ್ರದೇಶದಲ್ಲಿ ಶಾಖೆಯನ್ನು ತೆರೆದಿರುವುದೆಲ್ಲನ್ನೂ ಗಮನಿಸಿದಾಗ ಸಂಸ್ಥೆಯು ಗ್ರಾಮೀಣ ಪ್ರದೇಶಕ್ಕೆ ಒಂದು ವಿಭಿನ್ನವಾದ ನಿಲುವನ್ನು ಹೊಂದಿದೆ ಎಂಬುದನ್ನು ಹೇಳಬಹುದು. ಹಾಗಾಗಿ ಸಂಶಿ ಅರ್ಬನ್ ಕೋ-ಆಪರೇಟಿವ್ ಸೊಸೈಟಿಯು ಮಾದರಿ ಸಹಕಾರಿ ಸಂಸ್ಥೆಯಾಗಿ ಹೊರಹೊಮ್ಮಿದೆ.

ಪ್ರಾರಂಭದಲ್ಲಿ ಕೇವಲ 503 ಸದಸ್ಯರಿಂದ 4,07,300.00 ಶೇರು ಬಂಡವಾಳದೊಂದಿಗೆ ಸಂಸ್ಥಾಪಕ ಅಧ್ಯಕ್ಷರಾದ ಡಿ.ವ್ಹಿ. ಸುಂಕದ ಹಾಗೂ ಉಪಾಧ್ಯಕ್ಷ ಎಂ.ಪಿ. ಕೋರಿ ಇವರ ನೇತೃತ್ವದಲ್ಲಿ ದಕ್ಷ ಆಡಳಿತ ಹಾಗೂ ನಿಸ್ವಾರ್ಥಸೇವೆ ನಡೆಯ ಆಡಳಿತ ಮಂಡಳಿಯೊಂದಿಗೆ ಪ್ರಾರಂಭವಾದ ಸಂಸ್ಥೆಯು ಪ್ರಾರಂಭದ 7 ತಿಂಗಳ ಅವಧಿಯನ್ನು 25,488.00 ಲಾಭಗಳಿಸುವ ಮೂಲಕ ಪ್ರಾರಂಭಿಕ ಯಶಸ್ಸನ್ನು ತನ್ನ ಮುಡಿಗೇರಿಸಿತು.

ಆರ್ಥಿಕ ಹಾಗೂ ಸಾಮಾಜಿಕ ಬೇಡಿಕೆಗಳನ್ನು ಈಡೇರಿಸಲು ಧ್ಯೇಯವಾಗಿಸಿಕೊಂಡು ವ್ಯವಹಾರ ನಿರ್ವಹಣೆಯನ್ನು ಸದಸ್ಯರ ಬೇಡಿಕೆಯನುಸಾರವಾಗಿ ಸಾಲವಿತರಿಸುವುದು ಹಾಗೂ ವಿಶ್ವಾಸ ಪೂರಕವಾದ ಹಾಗೂ ಸುಭದ್ರ ಠೇವಣಿಯ ಯೋಜನೆಯನ್ನು ಸದಸ್ಯರಿಗೆ ನೀಡುತ್ತಾ ಸಂಸ್ಥೆಯು ಪ್ರಾರಂಭದ 5 ವರ್ಷ ಅವಧಿಯಲ್ಲಿಯೇ ಸುಸಜ್ಜಿತ ಸ್ವಂತ ಕಟ್ಟಡವನ್ನು ಹೊಂದಿತು. ಸಂಘದ ವ್ಯವಹಾರಗಳು ಸಂಪೂರ್ಣ ಗಣಕೀಕರಣಗೊಂಡಿದ್ದು, ಎಲ್ಲ ಶಾಖೆಯಲ್ಲಿ ಈ-ಸ್ಟಾಂಪ್ ಸೇವೆ ಹಾಗೂ ಪಾನ್‌ಕಾರ್ಡ ಸೇವೆ, ಕೇಂದ್ರ ಕಚೇರಿಯಲ್ಲಿ ಸೇಫ್ ಲಾಕರ ಡಿಪಾಸಿಟ್ ಸೇವೆಯನ್ನು ಒಳಗೊಂಡಿದೆ.

**ಮೊಬೈಲ್ ವ್ಯಾನ್ ಬ್ಯಾಂಕಿಂಗ್ ಸೇವೆ :** ಅತಿ ಹೆಚ್ಚು ಗ್ರಾಮೀಣ ಪ್ರದೇಶವನ್ನು ಹೊಂದಿರುವಂತಹ ನಮ್ಮ ದೇಶದಲ್ಲಿ ಬ್ಯಾಂಕಿಂಗ್




ಸೇವೆಯು ಗ್ರಾಮಾಂತರ ಪ್ರದೇಶದಲ್ಲಿ ಸಾಕಷ್ಟು ಹಿಂದೆ ಉಳಿದಿದೆ. ಅದರಲ್ಲೂ ಕುಂದಗೋಳ ತಾಲೂಕು ಅತಿ ಹೆಚ್ಚು ಹಳ್ಳಿಗಳನ್ನು ಒಳಗೊಂಡಿದ್ದು, ಈ ಪ್ರದೇಶದಲ್ಲಿ ಬ್ಯಾಂಕಿಂಗ್ ಸೇವೆ ಇಲ್ಲದಿರುವುದನ್ನು ಗಮನಿಸಿ ಹೊಸದಾಗಿ ಶಾಖೆಯನ್ನು ಪ್ರಾರಂಭಿಸುವುದರ ಬದಲಾಗಿ, ಸಹಕಾರ ರಂಗದಲ್ಲಿ ಒಂದು ವಿಭಿನ್ನ ವ್ಯವಹಾರ ಪದ್ದತಿಯಯಾದ ಮೊಬೈಲ್ ವ್ಯಾನ್ ಬ್ಯಾಂಕಿಂಗ್ ಸೇವೆಯನ್ನು ಪ್ರಾರಂಭಿಸಲಾಯಿತು. ವಾರದಲ್ಲಿ ಸುಮಾರು 22 ಗ್ರಾಮೀಣ ಪ್ರದೇಶಗಳಿಗೆ ಹಣಕಾಸು ಸೇವೆ ನೀಡಲಾಗುತ್ತಿದೆ.

### ಮೊಬೈಲ್ ಬ್ಯಾಂಕಿಂಗ್ ಅನಕೂಲಗಳು

1) ಪ್ರಾರಂಭಿಕ ವೆಚ್ಚ, ನಿರ್ವಹಣಾ ವೆಚ್ಚ ಕಡಿಮೆ ಇರುತ್ತದೆ.
2) ಈ ರೀತಿ ವ್ಯವಹಾರ ಪ್ರಾರಂಭಿಸಿ ಮುಂದೆ ಅಲ್ಲಿ ಅನೂಕೂಲ ಪ್ರದೇಶದಲ್ಲಿ ಶಾಖೆ ತಯಾರಿಸಬಹುದು.
3) ಪಿಗ್ಮೀ ಠೇವಣಿ ಹಾಗೂ ಸಣ್ಣ ಪ್ರಮಾಣದ ಸಾಲದ ಹಣ ಬೆಳವಣಿಗೆಗೆ ಸಹಕಾರಿ.
4) ಸಣ್ಣ ವ್ಯವಹಾರಸ್ಥರಿಗೆ, ಕೂಲಿ ಕಾರ್ಮಿಕರಿಗೆ ಸಾಲದ ಸೌಲಭ್ಯ ನೀಡಬಹುದು.

### ಚಿನ್ನಾಭರಣ ಖರೀದಿ ಯೋಜನೆ

ಈ ಒಂದು ಯೋಜನೆಯಲ್ಲಿ ಸದಸ್ಯರು ತಮಗೆ ಇಷ್ಟವಾದ ಬಂಗಾರದ ಆಭರಣವನ್ನು ತಮಗೆ ಇಷ್ಟವಾದ ಮಳಿಗೆಯಲ್ಲಿ ಆಭರಣವನ್ನು ಖರೀದಿಸಬಹುದು. ಚಿಕ್ಕವ್ಯಾಪಾರಸ್ಥರು, ಕೂಲಿ ಕಾರ್ಮಿಕರು ಈಗಿನ ದುಬಾರಿ ಮೊತ್ತದಲ್ಲಿ ಚಿನ್ನಾಭರಣ ಖರೀಸ ಲಾಗದಿದ್ದರೆ, ಈ ಯೋಜನೆಯಲ್ಲಿ ಸಾಲಪಡೆದು ಪಿಗ್ಮಿ ಮುಖಾಂತರ ಸಾಲವನ್ನು ಪಾವತಿಸುವ ವ್ಯವಸ್ಥೆಯನ್ನು ಸಂಸ್ಥಯು ನೀಡುತ್ತಿದೆ.

### ಸಂಸ್ಥೆಯ ಆರ್ಥಿಕ ಸ್ಥಿತಿ

ಪ್ರಸ್ತುತ ಸಂಘವು ಸರ್ಕಾರ ಹಾಗೂ ಇಲಾಖೆ ರೂಪಿಸುವ ನಿಯನಾಮಳಿಯನ್ನು ಅಳವಡಿಸಿಕೊಂಡು ಅತ್ಯಂತ ಸ್ಪರ್ಧಾತ್ಮಕ ಬಡ್ಡಿದರವನ್ನು ನಿಗದಿಪಡಿಸಿ ಠೇವಣಿ ಹಾಗೂ ಸಾಲಗಳ ಉತ್ತಮ ಪ್ರಮಾಣದಲ್ಲಿ ಬೆಳೆಯವಂತೆ ಗಮನಿಸಿ ಹಂತ ಹಂತವಾಗಿ ವ್ಯವಹಾರದಲ್ಲಿ ಬೆಳವಣಿಗೆಯನ್ನು ಕಾಣುತ್ತಿದೆ.

| ಸಂಘದ ಪ್ರಗತಿ ಪಕ್ಷಿನೋಟ (ರೂ.ಗಳಲ್ಲಿ) | | |
|---|---|---|
| ವಿವರ | 31.03.2020ಕ್ಕೆ | 31.03.2021ಕ್ಕೆ |
| ಸದಸ್ಯರ ಸಂಖ್ಯೆ | 3915 | 4345 |
| ಶೇರು ಬಂಡವಾಳ | 66,16,200.00 | 66,46,100.00 |
| ನಿಧಿಗಳು | 3,05,14,709.00 | 3,65,21,912.82 |
| ಠೇವಣಿಗಳು | 27,22,58,101.00 | 29,67,32,257.30 |
| ಸಾಲಗಳು | 14,47,30,000.00 | 17,90,15,262.90 |
| ದುಡಿಯುವ ಬಂಡವಾಳ | 31,77,78,559.00 | 34,83,49,407.82 |
| ಡಿವ್ಹಿಡೆಂಡ್ | 16% | – |
| ನಿವ್ವಳ ಲಾಭ | 70,19,980.00 | 81,40,464.38 |

### ಪರಿಹಾರ ನಿಧಿಗಳಿಗೆ ನೀಡಿರುವುದು

ಸಂಘವು ಕೋವಿಡ್–19 ಮುಖ್ಯಂತ್ರಿಗಳ ಪರಿಹಾರ ನಿಧಿಗೆ ಧಾರವಾಡದ ಸಹಕಾರಿ ಸಂಘಗಳ ಸಹಾಯಕ ನಿಬಂಧಕರಿಗೆ ರೂ. 1,00,000/– ಸಹಾಯ ಧನವನ್ನು ನೀಡಿದೆ. ಸಂಸ್ಥೆಯ ವತಿಯಿಂದ ನೆರೆ ಸಂತ್ರಸ್ಥರ ಮುಖ್ಯಮಂತ್ರಿಗಳ ಪರಿಗಾರ ನಿಧಿಗೆ ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿಯವರ ಮುಖಾಂತರ 1,00,000/– ಸಹಾಯ ಧನವನ್ನು ನೀಡಿದೆ. ಇದೇ ಸಾಲಿನಲ್ಲಿ ಕೊರೊನಾ ಸೇನಾನಿಗಳಾದ ಆಶಾ ಕಾರ್ಯಕರ್ತೆಯರಿಗೆ ಸಹಾಯ ಧನ ನೀಡಿ ಸನ್ಮಾನಿಸಲಾಗಿದೆ.



### ಸದಸ್ಯರಿಗೆ ವಿಶೇಷ ಸಹಾಯಧನದ ಸೌಲಭ್ಯಗಳು

ಸದಸ್ಯರ ಮಕ್ಕಳ ವಿಧ್ಯಾಭ್ಯಾಸ ನಿಧಿಯಿಂದ ಸದಸ್ಯರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಸಹಾಯಧನ, ಸದಸ್ಯರ ಕಲ್ಯಾಣ ನಿಧಿಯಿಂದ ಸದಸ್ಯರು ಶಸ್ತ್ರ ಚಿಕಿತ್ಸೆ ಹಾಗೂ ಇತರೆ ರೋಗಗಳಿಗೆ ತುತ್ತಾದರೆ ಸಹಾಯಧನ ನೀಡುವುದು, ಅಪಘಾತ ವಿಮೆ ನಿಧಿಯಿಂದ ಯಾವುದೇ ಸದಸ್ಯರು ಅಪಘಾತದಲ್ಲಿ ಮೃತರಾದಲ್ಲಿ ಸಹಾಯಧನ ನೀಡುವುದು, ಸದಸ್ಯರ ಮರಣೋತ್ತರ ನಿಧಿಯಿಂದ ಸದಸ್ಯರು ಮರಣಹೊಂದಿದರೆ ಸಹಾಯಧನ ನೀಡುವಂತಹದು ಸಂಘದ ಸಾಮಾಜಿಕ ಜವಾಬ್ದಾರಿಯನ್ನಾಗಿಸಿಕೊಂಡಿದೆ.

## ಸಂಘದ ಆಡಳಿತ ಮಂಡಳಿ



# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಸಹಕಾರ ಸಂಘಗಳ ಹಾಗೂ ಸೌಹಾರ್ದ ಸಹಕಾರಿಗಳ 2020–21ರ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಲು ಕಾಲಾವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಮತ್ತು ತಿದ್ದುಪಡಿ ಆದೇಶದ ಸಂಖ್ಯೆ: ಸಿಒ 60 ಸಿಎಲ್ಎಮ್ 2021, ದಿನಾಂಕ: 04.08.2021 ಮತ್ತು 05.08.2021.
2. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಪತ್ರ ಸಂಖ್ಯೆ: ಲೆಪಶಾ/ಇತರೆ/ ಸಸಂಲೆಪನೆಅವಿ/02/2021–22, ದಿನಾಂಕ: 15.07.2021.

## ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶಗಳಲ್ಲಿ ಸಹಕಾರ ಸಂಘಗಳ ಹಾಗೂ ಸೌಹಾರ್ದ ಸಹಕಾರಿಗಳ 2020–21ರ ವಾರ್ಷಿಕ ಸಾಮಾನ್ಯ ಸಭೆಗಳನ್ನು ಡಿಸೆಂಬರ್ 25, 2021ರವರೆಗೆ ವಿಸ್ತರಿಸಿ ಮತ್ತು Video Conference/Virtual Meeting ಮೂಲಕ ನಡೆಸಲು ಅನುಮತಿ ನೀಡಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ(2)ರ ಪತ್ರದಲ್ಲಿ ರಾಜ್ಯದಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿದ್ದ ಕಾರಣ ಎಲ್ಲಾ ಸಹಕಾರ ಸಂಘ/ಸೌಹಾರ್ದ ಸಹಕಾರಿಗಳನ್ನು ಸಕಾಲದಲ್ಲಿ ಲೆಕ್ಕಪರಿಶೋಧನೆ ನಿರ್ವಹಿಸಲು ಕಷ್ಟಸಾಧ್ಯವಾಗಿರುತ್ತದೆ. ಆದಕಾರಣ ಸಹಕಾರ ಸಂಘಗಳು/ಸೌಹಾರ್ದ ಸಹಕಾರಿಗಳ 2020–21ನೇ ಸಾಲಿನ ಲೆಕ್ಕಪರಿಶೋಧನಾ ಕಾರ್ಯ ಮಾಡುವುದನ್ನು 4 ತಿಂಗಳವರೆಗೆ ಅಂದರೆ 1ನೇ ಸೆಪ್ಟೆಂಬರ್ 2021 ರಿಂದ 31ನೇ ಡಿಸೆಂಬರ್ 2021ರವರೆಗೆ ವಿಸ್ತರಿಸಿ ಅನುಮತಿ ನೀಡುವಂತೆ ಅಧ್ಯಕ್ಷರು, ಕರ್ನಾಟಕ ಸ್ಟೇಟ್ ಚಾರ್ಟರ್ಡ್ ಅಕೌಂಟೆಂಟ್ಸ್ ಅಸೋಸಿಯೇಷನ್‌ರವರು ವಿನಂತಿಸಿಕೊಂಡಿರುವುದಾಗಿ ತಿಳಿಸಿ, ಅದರಂತೆ, ಪ್ರಸಕ್ತ ವರ್ಷದ ಲೆಕ್ಕಪರಿಶೋಧನಾ ವರದಿಗಳನ್ನು ಸಲ್ಲಿಸುವ ದಿನಾಂಕವನ್ನು ವಿಸ್ತರಿಸಲು ಲೆಕ್ಕಪರಿಶೋಧನಾ ನಿರ್ದೇಶಕರು ಸರ್ಕಾರವನ್ನು ಕೋರಿರುತ್ತಾರೆ.

ರಾಜ್ಯದಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ, ಸಹಕಾರ ಸಂಘಗಳ ಹಾಗೂ ಸೌಹಾರ್ದ ಸಹಕಾರಿಗಳ 2020–21ರ ಲೆಕ್ಕಪರಿಶೋಧನಾ ಕಾರ್ಯವನ್ನು ಮುಗಿಸಿ ವರದಿಗಳನ್ನು ಸಲ್ಲಿಸುವ ಕಾಲಾವಧಿಯನ್ನು ವಿಸ್ತರಿಸುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಇ 45 ಸಿಎಲ್ಎಮ್ 2021 (ಇ) ಬೆಂಗಳೂರು, ದಿನಾಂಕ : 23.08.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 70ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕ್ರಮವಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 63(1) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 33(1) ಕ್ಕೆ ವಿನಾಯಿತಿ ನೀಡಿ, ಪ್ರತಿ ಸಹಕಾರ ವರ್ಷ ಮುಕ್ತಾಯವಾದ ನಂತರ ಮುಂಬರುವ ಸೆಪ್ಟೆಂಬರ್ ತಿಂಗಳ ಒಂದರೊಳಗಾಗಿ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು ಎಂಬುದನ್ನು ಸಡಿಲಿಸಿ, 2020–21ನೇ ಸಾಲಿನ ಲೆಕ್ಕಪರಿಶೋಧನಾ ಕಾರ್ಯವನ್ನು ಮುಗಿಸಿ ವರದಿಗಳನ್ನು ಸಲ್ಲಿಸಲು ದಿನಾಂಕ: 31.10.2021ರ ವರೆಗೆ ಅವಧಿಯನ್ನು ವಿಸ್ತರಿಸಿ ಆದೇಶಿಸಿದೆ.

ಮುಂದುವರೆದು, ಮೇಲಿನ ಅವಧಿ ವಿಸ್ತರಣೆಗೆ ಅನುಗುಣವಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 63ರ ಇತರೆ ಉಪಬಂಧಗಳು ಹಾಗೂ ಇದಕ್ಕೆ ಸಂಬಂಧಿಸಿದ ನಿಯಮಗಳು ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 33ರ ಇತರೆ ಉಪಬಂಧಗಳಲ್ಲಿನ ಅವಕಾಶಗಳಿಗೆ ಅವಧಿ ವಿಸ್ತರಿಸಲು ಲೆಕ್ಕಪರಿಶೋಧನಾ ನಿರ್ದೇಶಕರು ಸೂಕ್ತ ಆದೇಶ ಹೊರಡಿಸಲು ಕ್ರಮವಿಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/–
ಎಂ. ವೆಂಕಟಸ್ವಾಮಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ,
ಸರ್ಕಾರದ ಜಂಟಿಕಾರ್ಯದರ್ಶಿ, ಸಹಕಾರ ಇಲಾಖೆ.

# ವಿವಿಧ ಕಾಯ್ದೆಗಳಲ್ಲಿ ಇತ್ತೀಚಿನ ಬದಲಾವಣೆಯ ಕಾರಣ ಸಹಕಾರ ಸಂಘಗಳು ಗಮನಿಸಬೇಕಾದ ಪ್ರಮುಖ ಅಂಶಗಳು

▸▸ **ಬಿ.ವಿ.ರವೀಂದ್ರನಾಥ್**, ಚಾರ್ಟರ್ಡ್ ಅಕೌಂಟೆಂಟ್, ಸಾಗರ. 7353765599 : bvrnath@gmail.com

## ಸರಕು ಮತ್ತು ಸೇವಾ ತೆರಿಗೆಕಾಯ್ದೆಯ ಅಂಶಗಳು

**● ಸಹಕಾರ ಸಂಘಗಳಿಗೆ ಜಿಎಸ್‌ಟಿ ಅನ್ವಯಿಸುವುದೆ?**

- ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ಎಲ್ಲ ವ್ಯಕ್ತಿಗಳಿಗೂ ಅನ್ವಯಿಸುತ್ತದೆ.
- ವ್ಯಕ್ತಿಯ ಪರಿಭಾಷೆಯಲ್ಲಿ ಸಹಕಾರ ಸಂಘಗಳೂ ಸೇರಿವೆ.

**● ಯಾವಸಹಕಾರ ಸಂಘಗಳು ಜಿಎಸ್‌ಟಿ ನೋಂದಣಿ ಪಡೆಯಬೇಕು?**

- ಸಹಕಾರ ಸಂಘಗಳು ತೆರಿಗೆದಾಯಕ ಸೇವೆ ನೀಡುತ್ತಿದ್ದಲ್ಲಿ ಮತ್ತು ಒಟ್ಟು ವಹಿವಾಟು 20 ಲಕ್ಷ ಮೀರಿದಲ್ಲಿ ನೋಂದಣಿಯಾಗಿ ತೆರಿಗೆದಾಯಕ ವಹಿವಾಟಿನ ಮೇಲೆ ತೆರಿಗೆ ಪಾವತಿಸಬೇಕಿರುತ್ತದೆ.
- ಸಹಕಾರ ಸಂಘಗಳ ಎಲ್ಲ ರೀತಿಯ ಒಟ್ಟು ಆದಾಯಗಳು ಅಂದರೆ ಬಡ್ಡಿಯೂ ಸೇರಿದಂತೆ ಕಮಿಷನ್, ಬೋನಸ್, ದಾಖಲಾತಿ ಶುಲ್ಕ, ಲಾಕರ್ ಬಾಡಿಗೆ, ಫೀಸ್, ಬ್ರೋಕರೇಜ್, ರಿಕವರಿ ಚಾರ್ಜಸ್, ಡಿಸ್ಕೌಂಟ್, ಲೀಗಲ್‌ಯಾ ಇತರೆ ಶುಲ್ಕಗಳು ವಾರ್ಷಿಕ 20 ಲಕ್ಷ ರೂಗಳಿಗೆ ಮೀರುವಂತಿದ್ದರೆ ನೋಂದಣಿ ಪಡೆಯಬೇಕು.
- ಸಹಕಾರ ಸಂಘಗಳ ಎಲ್ಲ ಬಡ್ಡಿಯೇತರ ಆದಾಯಗಳ ಮೇಲೆ ಶೇ.18ರಂತೆ ಜಿಎಸ್‌ಟಿ ತೆರಿಗೆ ಪಾವತಿಸಬೇಕು
- ವಹಿವಾಟು ಎಂದರೆ ಸರಕು ಮತ್ತು ಸೇವೆಗಳ ಸರಬರಾಜು ಎರಡೂ ಸೇರಿರುತ್ತದೆ.
- ಕೇವಲ ವಿನಾಯಿತಿ ಸೇವೆ ನೀಡುವವರು ಅರ್ಹ ಮಿತಿದಾಟಿದರೂ ನೋಂದಣಿ ಕಡ್ಡಾಯವಿಲ್ಲ.
- ಕರದಾಯಕ ಸೇವೆ ನೀಡುವ ಸಂಘದ ಒಟ್ಟು ವಹಿವಾಟು ಮಿತಿದಾಟದಿದ್ದಲ್ಲಿ ನೋಂದಣ ಿಕಡ್ಡಾಯವಿಲ್ಲ.

**● ಸಹಕಾರ ಸಂಘಗಳ ತೆರಿಗೆ ಮುಕ್ತ ಸೇವೆಗಳು/ಆದಾಯಗಳು**

- ತೆರಿಗೆ ಮುಕ್ತ ಸರಕುಗಳ ಮಾರಾಟ
- ದಂಡ ಬಡ್ಡಿ, ವಿಳಂಬ ಬಡ್ಡಿ ಸೇರಿದಂತೆ ಸಾಲಗಳ ಮೇಲಿನ ಎಲ್ಲಾರೀತಿಯ ಬಡ್ಡಿಗಳು
- ಠೇವಣಿ/ಹೂಡಿಕೆಗಳ ಮೇಲಿನ ಬಡ್ಡಿಗಳು
- ಹೂಡಿಕೆಗಳ ಮಾರಾಟದಿಂದ ಬಂದ ಲಾಭ
- ಹೂಡಿಕೆಗಳ ಮೇಲಿನ ಲಾಭಾಂಶ (ಡಿವಿಡೆಂಡ್)
- ಸ್ಥಿರಾಸ್ತಿ/ಚರಾಸ್ತಿಗಳ ಮಾರಾಟದ ಲಾಭ
- ಸದಸ್ಯರಿಂದ ಸಂಗ್ರಹಿಸಿದ ದೇಣಿಗೆಗಳು, ನಿಧಿಗಳಿಗೆ ಚಂದಾ ವಗೈರೆ

**● ಸಹಕಾರಸಂಘಗಳ ತೆರಿಗೆದಾಯಕ ಸೇವೆಗಳು/ ಆದಾಯಗಳು**

- ಮಾರಾಟವೂ ಸೇರಿದಂತೆ ಯಾವುದೇ ರೀತಿಯ ವಾಣಿಜ್ಯ ವ್ಯವಹಾರದ ಆದಾಯ
- ಚೆಕ್, ಡಿಡಿ, ಪೇ ಆರ್ಡರ್, ಇನ್ನಿತರ ಹಣವರ್ಗಾವಣೆ ಶುಲ್ಕಗಳು
- ಎಲ್ಲಾ ರೀತಿಯ ದಲ್ಲಾಳಿ (ಕಮಿಷನ್)
- ಸಾಲ ಮಂಜೂರಾತಿ ಪ್ರಕ್ರಿಯೆ ಶುಲ್ಕಗಳು
- ಎಟಿಎಂ, ಕ್ರೆಡಿಟ್/ಡೆಬಿಟ್‌ಕಾರ್ಡ್ ಶುಲ್ಕಗಳು
- ಪ್ರೀಪೇಮೆಂಟ್‌ಚಾರ್ಜಸ್
- ಲಾಕರ್ ಬಾಡಿಗೆ
- ವಿದೇಶೀ ವಿನಿಮಯ ಶುಲ್ಕಗಳು
- ಲೆಟರ್ ಆಫ್‌ಕ್ರೆಡಿಟ್/ಗ್ಯಾರಂಟೀಕಮೀಷನ್
- ಸದಸ್ಯತ್ವ ಶುಲ್ಕ ಪ್ರವೇಶ ಶುಲ್ಕ
- ಇತರೆ ಯಾವುದೇ ಆದಾಯಗಳು.

**● ನೋಂದಣಿಗೆಅಗತ್ಯ ಮಾಹಿತಿ ಮತ್ತು ದಾಖಲೆಗಳು**

- Regn Certificate copy
- Name & PAN No of the Co operative
- Valid Email & Mobile No.
- Bank A/c No. & IFS Code
- Bank Pass Book copy
- Rent Agreement/property docs
- Letter of authority in favour of CEO or AP (Authorised Person)
- Photographs of CEO or AP
- Aadhaar, PAN, Voter ID of CEO or AP
- Digital Signature of CEO or AP

**● ನೋಂದಣಿ ಪ್ರಕ್ರಿಯೆ**

- ಎಲ್ಲವೂ ಅಂತರ್ಜಾಲದ ಮೂಲಕ
- ಭೌತಿಕ ದಾಖಲೆ ಸಲ್ಲಿಕೆ ಇರುವುದಿಲ್ಲ
- Provisional I ಆಯೊಡನೆ ವ್ಯವಹಾರ ಪ್ರಾರಂಭಿಸಬಹುದು
- ನೋಂದಣಿಗೆ ಯಾವುದೇ ಶುಲ್ಕವಿರುವುದಿಲ್ಲ
- ನೋಂದಣಿಯ ಸಂದರ್ಭದಲ್ಲಿ ಯಾವುದೇ ಠೇವಣಿ ಇಡುವ ಅಗತ್ಯವಿಲ್ಲ.
- ಸಲ್ಲಿಸಿದ ದಾಖಲೆಗಳು, ವಿವರಗಳು ತಪ್ಪಿದ್ದಲ್ಲಿ ಸರಿಪಡಿಸಲು ಅವಕಾಶ
- ಸಲ್ಲಿಸಿದ ದಾಖಲೆಗಳು, ವಿವರಗಳು ಖೊಟ್ಟಿಯಾಗಿದ್ದಲ್ಲಿ ದಂಡನೆ
- ನೋಂದಣಿ ಪ್ರಮಾಣ ಪತ್ರಗಳನ್ನು ಅಂತರ್ಜಾಲದಿಂದಲೇ

ಪಡೆಯಬೇಕು

- **ಸಹಕಾರಿ ಸಂಸ್ಥೆಗಳ ತೆರಿಗೆ ಮುಕ್ತ ಸೇವೆಗಳು/ಆದಾಯಗಳು**

- ತೆರಿಗೆ ಮುಕ್ತ ಸರಕುಗಳ ಮಾರಾಟ
- ದಂಡ ಬಡ್ಡಿ, ವಿಳಂಬ ಬಡ್ಡಿ ಸೇರಿದಂತೆ ಸಾಲಗಳ ಮೇಲಿನ ಎಲ್ಲಾ ರೀತಿಯ ಬಡ್ಡಿಗಳು
- ಠೇವಣಿ/ಹೂಡಿಕೆಗಳ ಮೇಲಿನ ಬಡ್ಡಿಗಳು
- ಹೂಡಿಕೆಗಳ ಮಾರಾಟದಿಂದ ಬಂದ ಲಾಭ
- ಹೂಡಿಕೆಗಳ ಮೇಲಿನ ಲಾಭಾಂಶ (ಡಿವಿಡೆಂಡ್)
- ಸ್ಥಿರಾಸ್ತಿ/ಚರಾಸ್ತಿಗಳ ಮಾರಾಟದ ಲಾಭ
- ಸದಸ್ಯರಿಂದ ಸಂಗ್ರಹಿಸಿದ ದೇಣಿಗೆಗಳು, ನಿಧಿಗಳಿಗೆ ಚಂದಾ ವಗೈರೆ

- **ಸಹಕಾರಿ ಸಂಸ್ಥೆಗಳ ತೆರಿಗೆ ದಾಯಕ ಸೇವೆಗಳು/ಆದಾಯಗಳು**

- ಮಾರಾಟವೂ ಸೇರಿದಂತೆ ಯಾವುದೇ ರೀತಿಯ ವಾಣಿಜ್ಯ ವ್ಯವಹಾರದ ಆದಾಯ
- ಚೆಕ್, ಡಿಡಿ, ಪೇ ಆರ್ಡರ್, ಇನ್ನಿತರ ಹಣವರ್ಗಾವಣೆ ಶುಲ್ಕಗಳು
- ಎಲ್ಲಾ ರೀತಿಯ ದಲ್ಲಾಳಿ (ಕಮಿಷನ್)
- ಸಾಲ ಮಂಜೂರಾತಿ ಪ್ರಕ್ರಿಯೆ ಶುಲ್ಕಗಳು
- ಪ್ರೀಪೇಮೆಂಟ್ ಚಾರ್ಜಸ್
- ಲಾಕರ್ ಬಾಡಿಗೆ
- ವಿದೇಶೀ ವಿನಿಮಯ ಶುಲ್ಕಗಳು
- ಲೆಟರ್ ಆಫ್ ಕ್ರೆಡಿಟ್/ಗ್ಯಾರಂಟೀ ಕಮೀಷನ್
- ಸದಸ್ಯತ್ವ ಶುಲ್ಕ ಪ್ರವೇಶ ಶುಲ್ಕ
- ಇತರೆ ಯಾವುದೇ ಆದಾಯಗಳು

- **ತೆರಿಗೆ ಹಿಂಪಡೆಯುವ ಸೌಲಭ್ಯ**

- ನೀಡಿದ ವಿನಾಯಿತಿ ಸೇವೆ, ತೆರಿಗೆದಾಯಕ ಸೇವೆ–ಇವುಗಳ ಅನುಪಾತಕ್ಕೆ ಅನುಗುಣವಾಗಿ ಹೂಡುವಳಿ ತೆರಿಗೆ ಹಿಂಪಡೆಯುವ ಸೌಲಭ್ಯವಿದೆ.
- ಠೇವಣಿ ಸ್ವೀಕರಿಸುವ, ಸಾಲ ನೀಡುವ ಹಣಕಾಸು ಸಂಸ್ಥೆಗಳು ಹೂಡುವಳಿ ತೆರಿಗೆಯ 50%ರಷ್ಟನ್ನು ಹಿಂಪಡೆಯುವ ಸೌಲಭ್ಯವಿದೆ
- ಒಮ್ಮೆ ಈ ಸೌಲಭ್ಯ ಪಡೆದು ಕೊಂಡಲ್ಲಿ ವರ್ಷ ಮಧ್ಯದಲ್ಲಿ ಬದಲಾವಣೆಗೆ ಅವಕಾಶವಿಲ್ಲ
- ವ್ಯವಹಾರಕ್ಕೆ ಬಳಸದ ಸರಕುಯಾ ಸೇವೆಯ ಮೇಲಿನ ಹೂಡುವಳಿ ತೆರಿಗೆ ಪಡೆಯುವಂತಿಲ್ಲ
- ಒಂದೇ ಪಾನ್ ಸಂಖ್ಯೆಗೆ 100% ಹಿಂಪಡೆಯುವ ಸೌಲಭ್ಯ.

- **ಸಲ್ಲಿಸಬೇಕಾದ ವರದಿಗಳು**

- GST 1 : Return of Outward Supply
- GST 2 : Return of Inward Supply
- GST 3 : Monthly Return (Auto)
- GST 5 : Monthly Report (NRI)
- GST 6 : ISD (Intermediary Service Distributor)
- GST 9 : Annual Return.

- **ಕರದರಪಟ್ಟಿ (ಸೇವೆ)ಯ ಮಾದರಿ**

**ಪ್ರತ್ಯೇಕಕರರಸೀತಿ ಪದ್ಧತಿ**

TAX INVOICE (SERVICE) — Original*

ಸುವಿಧಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ
ರಾಜೇಂದ್ರಪ್ರಸಾದ್ ರಸ್ತೆ, ಸಾಗರ – ಶಿವಮೊಗ್ಗ ಜಿಲ್ಲೆ

GST No: 29AAGAS9133B1Z5
Tax payable on RCM? Y/N
Invoice No. : <= 16 characters
Invoice Date : dd-mm-yyyy

DETAILS OF RECEIVER (BILLED TO)
NAME :
ADDRESS :
STATE CODE
GSTIN No :

| # | DESCRIPTION | SAC | TOTAL | TAX | VALUE |
|---|---|---|---|---|---|
| 1 | Interest on Loans | 9971 | 16,190-00 | 0% | 16,000-00 |
| 2 | Documentation fees | 998214 | 500-00 | 18% | 500-00 |
| | Exclusive method of levying GST on service charges | | Other Charges | | |
| | | | GST | 18% | 90-00 |
| | | | TOTAL AMOUNT | | 16,590-00 |

Rupees sixteen thousand five hundred ninety only

Computer generated invoice — Signature/Digitally Signed

**ಕರಒಳಗೊಂಡ ರಸೀತಿ ಪದ್ಧತಿ**

TAX INVOICE (SERVICE) — Original*

ಸುವಿಧಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ
ರಾಜೇಂದ್ರಪ್ರಸಾದ್ ರಸ್ತೆ, ಸಾಗರ – ಶಿವಮೊಗ್ಗ ಜಿಲ್ಲೆ

GST No: 29AAGAS9133B1Z5
Tax payable on RCM? Y/N
Invoice No. : <= 16 characters
Invoice Date : dd-mm-yyyy

DETAILS OF RECEIVER (BILLED TO)
NAME :
ADDRESS :
STATE CODE
GSTIN No :

| # | DESCRIPTION | SAC | TOTAL | TAX | VALUE |
|---|---|---|---|---|---|
| 1 | Interest on Loans | 9971 | 16,190-00 | 0% | 16,000-00 |
| 2 | Documentation fees | 998214 | 424-00 | 18% | 424-00 |
| | Inclusive method of levying GST on service charges | | Other Charges | | |
| | | | GST | 18% | 76-00 |
| | | | TOTAL AMOUNT | | 16,500-00 |

Rupees sixteen thousand five hundred only

Computer generated invoice — Signature/Digitally Signed

- **ಟ್ಯಾಕ್ಸ್ ಇನ್ವಾಯ್ಸ್ (ಸರ್ವಿಸ್) – ಗಮನಿಸಬೇಕಾದ ಅಂಶಗಳು**

**ಸೇವಾ ಬಿಲ್ಲುಗಳ ಮೌಲ್ಯದ ಮಿತಿ**

- 200 ರೂಗಳವರೆಗೆ – ಕಡ್ಡಾಯವಿಲ್ಲ
- 200 ರೂಗಳಿಂದ 50,000 ರೂಗಳವರೆಗೆ – ಹೆಸರುಕಡ್ಡಾಯವಿಲ್ಲ
- 50,000 ರೂಗಳಿಂದ 2,00,000 ರೂಗಳವರೆಗೆ – ಹೆಸರು, ವಿವರಕಡ್ಡಾಯ
- 2,00,000 ರೂಗಳಿಗೆ ಮೇಲ್ಪಟ್ಟು – ಬ್ಯಾಂಕ್ ಮೂಲಕ ಸ್ವೀಕೃತಿ
- < 200 ಬಿಲ್‌ಗಳಿಗೆ ಒಟ್ಟು ಬಿಲ್ ಹಾಕಬಹುದು

**ದ್ವಿಪ್ರತಿಯಲ್ಲಿ ತಯಾರಿಸಬೇಕು**

- ಮೂಲಪ್ರತಿ – ಸ್ವೀಕರಿಸುವವನಿಗೆ
- ದ್ವಿಪ್ರತಿ – ಕಛೇರಿಯ ಪ್ರತಿ
- Service Account Code (SAC) ಕೋಡ್ ನಮೂದಿಸತಕ್ಕದ್ದು

ಮುಂದಿನ ಸಂಚಿಕೆಗೆ...

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ರಾಜ್ಯದಲ್ಲಿ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ಡಿಸೆಂಬರ್ 2021ರ ವರೆವಿಗೆ ವಿಸ್ತರಿಸಲು ಮತ್ತು video conference / virtual meeting ಮೂಲಕ ನಡೆಸಲು ಅನುಮತಿ ನೀಡುವ ಕುರಿತು.

ಓದಲಾಗಿದೆ : ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ:ಆರ್‌ಸಿಎಸ್/ಎಕ್ಸ್ಎಮ್ಸಿ/31/2021–22, ದಿನಾಂಕ:23.07.2021.

## ಪ್ರಸ್ತಾವನೆ

ಕೋವಿಡ್–19 ಸಾಂಕ್ರಾಮಿಕ ರೋಗವು ಹರಡುತ್ತಿರುವ ಕಾರಣ 2020–21ನೇ ಸಾಲಿನ ಸಹಕಾರ ಸಂಘಗಳ ವಾರ್ಷಿಕ ಸಾಮಾನ್ಯ ಸಭೆಗಳನ್ನು ಕಳೆದ ಸಾಲಿನಂತೆ ಡಿಸೆಂಬರ್ 2021ರವರೆಗೆ ವಿಸ್ತರಿಸಿ ಮತ್ತು video conference / virtual meeting ಮೂಲಕ ನಡೆಸಲು ಅನುಮತಿ ನೀಡುವಂತೆ ರಾಜ್ಯದ ವಿವಿಧ ಸಹಕಾರ ಸಂಸ್ಥೆಗಳು ಮತ್ತು ಸದಸ್ಯರು ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ಓದಲಾದ ನಿಬಂಧಕರ ಪ್ರಸ್ತಾವನೆಯಲ್ಲಿ ಕೋವಿಡ್–19 ನಿಯಮಾವಳಿಗಳನ್ನು ಅನುಸರಿಸಿ, ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ಎಲ್ಲಿ ಅವಕಾಶವಿರುವುದೋ ಅಂತಹ ಸಹಕಾರ ಸಂಘಗಳು ಭೌತಿಕ ಹಾಜರಾತಿಯೊಂದಿಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು, ಒಂದು ವೇಳೆ ಆ ರೀತಿ ಸಾಧ್ಯವಾಗದಿದ್ದ ಪಕ್ಷದಲ್ಲಿ ಅಂತಹ ಸಹಕಾರ ಸಂಸ್ಥೆಗಳು video conference / virtual meeting ವಿಧಾನವನ್ನು ಅನುಸರಿಸಿ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ಅನುಮತಿ ನೀಡಬಹುದೆಂದು ನಿಬಂಧಕರು ತಿಳಿಸಿರುತ್ತಾರೆ.

ರಾಜ್ಯದಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದ 2ನೇ ಅಲೆಯ ಕಾರಣದಿಂದ ಹಾಗೂ 3ನೇ ಅಲೆ ವ್ಯಾಪಿಸುವ ಸಾಧ್ಯತೆ ಇರುವ ಬಗ್ಗೆ ತಜ್ಞರು ಅಭಿಪ್ರಾಯಪಟ್ಟಿರುವ ಹಿನ್ನೆಲೆಯಲ್ಲಿ, 2020–21ನೇ ಸಾಲಿನಲ್ಲಿ ಅನುಮತಿ ನೀಡಿರುವಂತೆ, ಪ್ರಸಕ್ತ ಸಾಲಿನಲ್ಲಿಯೂ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳನ್ನು ನಡೆಸುವ ಅವಧಿಯನ್ನು 25 ಸೆಪ್ಟೆಂಬರ್ ರಿಂದ 25 ಡಿಸೆಂಬರ್ 2021 ವರೆವಿಗೆ ವಿಸ್ತರಿಸಲು ಹಾಗೂ ಈ ಸಭೆಗಳನ್ನು video conference / virtual meeting ಮೂಲಕವೂ ನಡೆಸಲು ಅನುಮತಿ ನೀಡುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 60 ಸಿಎಲ್ಎಮ್ 2021 (ಇ) ಬೆಂಗಳೂರು, ದಿನಾಂಕ : 04.08.2021

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 70ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಕ್ರಮವಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27(1)ರಲ್ಲಿ ಸಹಕಾರ ಸಂಘಗಳ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 27(ಹೆಚ್–3), 30(1) ಹಾಗೂ 60(1)ಗಳಲ್ಲಿ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ ತಿಂಗಳ ಇಪ್ಪತ್ತೈದನೇ ದಿನದೊಳಗೆ ನಡೆಸತಕ್ಕದ್ದು ಎಂಬ ಅವಕಾಶವನ್ನು ಸಡಿಲಿಸಿ, ಡಿಸೆಂಬರ್ ತಿಂಗಳ ಇಪ್ಪತ್ತೈದನೇ ದಿನದೊಳಗೆ ನಡೆಸಲು ಹಾಗೂ ಕೋವಿಡ್–19 ನಿಯಮಾವಳಿಗಳನ್ನು ಅನುಸರಿಸಿ, ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ಎಲ್ಲಿ ಅವಕಾಶವಿರುವುದೋ ಅಂತಹ ಸಹಕಾರ ಸಂಸ್ಥೆಗಳು ಭೌತಿಕ ಹಾಜರಾತಿಯೊಂದಿಗೆ ಮತ್ತು ಒಂದು ವೇಳೆ ಆ ರೀತಿ ಅವಕಾಶವಿಲ್ಲದಿದ್ದ ಪಕ್ಷದಲ್ಲಿ ಅಂತಹ ಸಹಕಾರ ಸಂಘಗಳು/ಸೌಹಾರ್ದ ಸಹಕಾರಿಗಳು video conference / virtual meeting ವಿಧಾನವನ್ನು ಅನುಸರಿಸಿ 2020–21ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ಈ ಕೆಳಕಂಡ ನಿಬಂಧನೆಗೊಳಪಟ್ಟು ನಡೆಸಲು ಅನುಮತಿ ನೀಡಿ ಆದೇಶಿಸಿದೆ.

- ಸರ್ವ ಸದಸ್ಯರ ಸಭೆಯನ್ನು video conference / virtual meeting ಮೂಲಕವೂ ನಡೆಸಬಹುದು.
- ಸರ್ವ ಸದಸ್ಯರ ಸಭೆ ನಡೆಯುವ ದಿನಾಂಕ ಮತ್ತು ವೇಳೆಯನ್ನು ದಿನಪತ್ರಿಕೆಯಲ್ಲಿ ಪ್ರಕಟಿಸುವುದು.
- ಸಭೆಯ ನೋಟೀಸು ಹಾಗೂ ಇನ್ನಿತರೆ ದಾಖಲಾತಿಗಳನ್ನು ಸಂಘದ ವೆಬ್‌ಸೈಟ್ ಮೂಲಕ ಪ್ರಚುರಗೊಳಿಸುವುದು ಹಾಗೂ ಹಾಲಿ ಅನುಸರಿಸುತ್ತಿರುವ ಪದ್ಧತಿಯಂತೆ ನೋಟೀಸುಗಳನ್ನು ಅಂಚೆಯ ಮೂಲಕ ರವಾನಿಸಲು ಸಹ ಕ್ರಮವಿಡತಕ್ಕದ್ದು.
- ಸದಸ್ಯರಿಗೆ ಡಿವಿಡೆಂಡ್‌ಗಳನ್ನು ಇಸಿಎಸ್ ಮೂಲಕ ಅವರುಗಳ ಖಾತೆಗೆ ಪಾವತಿಸಲು ಕ್ರಮವಿಡುವುದು.
- ಇಂಥಹ ಸಭೆಯ ನಡವಳಿಗಳನ್ನು ಅಧಿಕೃತವಾಗಿ ರೆಕಾರ್ಡ್ ಮಾಡಿ ದಾಖಲಿಸುವ ತಂತ್ರಜ್ಞಾನ ಅಳವಡಿಸಿಕೊಳ್ಳತಕ್ಕದ್ದು.
- ಸರ್ವ ಸದಸ್ಯರ ಸಭೆ ನಡೆಸುವ ಸ್ಥಳದಲ್ಲಿ ಕೋವಿಡ್–19ರ ನಿಯಮಾವಳಿಗಳಿಗೆ ಒಳಪಟ್ಟು ಹಾಜರಾತಿಯನ್ನು ನಿರ್ವಹಿಸಿ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ಅಧಿನಿಯಮಗಳನ್ವಯ ನಮೂದಿಸಿರುವ ಅಂಶಗಳನ್ನು ಕಾರ್ಯಸೂಚಿಯಲ್ಲಿ ಅಳವಡಿಸಿಕೊಂಡು ಹಾಲಿ ಪದ್ಧತಿಯಂತೆ ನಡವಳಿಗಳನ್ನು ನಡೆಸಲು ಕ್ರಮವಹಿಸತಕ್ಕದ್ದು.
- ಸರ್ವ ಸದಸ್ಯರ ಸಭೆ ನಡೆಸಲು ಕಾಲಕಾಲಕ್ಕೆ ಸರ್ಕಾರವು ಹೊರಡಿಸುವ ಕೋವಿಡ್ ಮಾರ್ಗಸೂಚಿಗಳನ್ನು ಮತ್ತು ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/–
ಎಂ. ವೆಂಕಟಸ್ವಾಮಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ,
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.



# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳುವಳಿಯ ಉಗಮ


ಲೇಖನ : ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು

ಬಸವೇಗೌಡ, ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು


**ಸಹಕಾರಿ ಪತ್ತಿನ ಸಂಸ್ಥೆಗಳ ಪುನಃಶ್ಚೇತನಕ್ಕಾಗಿ ಪುನರ್ ಬಂಡವಾಳೀಕರಣ ಕೈಗೊಳ್ಳಲು ಕಾರ್ಯತಂಡವನ್ನು ರಚಿಸಲಾಯಿತು. ಬೆಳೆ ವಿಮಾ ಯೋಜನೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಯಿತು. ಪುನರ್ ಬಂಡವಾಳೀಕರಣ ಯೋಜನೆಯಲ್ಲಿ ಸಹಕಾರ ಪತ್ತಿನ ಸಂಸ್ಥೆಗಳಿಗೆ ರೂ.8000 ಕೋಟಿಗಳನ್ನು ಮೀಸಲಿಡಲಾಯಿತು. ಕಿಸಾನ್ ಕ್ರೆಡಿಟ್ ಕಾರ್ಡಗಳನ್ನು ಎಲ್ಲಾ ಅರ್ಹ ರೈತರುಗಳಿಗೆ ನೀಡಲು ಗುರಿ ನಿರ್ಧರಿಸಲಾಯಿತು. ರಾಜ್ಯ ಸರ್ಕಾರಗಳು ಬಹುರಾಜ್ಯ ಸಹಕಾರ ಕಾಯಿದೆಯನ್ನು ಪರಿಶೀಲಿಸುವ ಕಾರ್ಯವಹಿಸಲಾಯಿತು. ಅಲ್ಲದೇ ಗೋದಾಮುಗಳ ಮತ್ತು ವೇರ್‌ಹೌಸ್‌ಗಳ ನಿರ್ಮಾಣಕ್ಕೆ ಸಾಮಾನ್ಯ ಬಡ್ಡಿ ದರದಲ್ಲಿ ಸಾಲ ಹಾಗೂ ಗ್ರಾಮೀಣ ಭಂಡಾರ ಯೋಜನೆಗೆ ವಿಶೇಷ ಒತ್ತು ನೀಡಲಾಯಿತು.**

... ಹಿಂದಿನ ಸಂಚಿಕೆಯಿಂದ

**ಹತ್ತನೇ ಪಂಚವಾರ್ಷಿಕ ಯೋಜನೆ (2002–2007) :** ಸಹಕಾರ ಬ್ಯಾಂಕಿನ ಕಾರ್ಯವಿಧಾನವು ದುರ್ಬಲ ಹಣಕಾಸಿನ ಸ್ಥಿತಿಯಿಂದಾಗಿ ಅಸ್ಥಿರಗೊಂಡಿದ್ದು, ಅವುಗಳನ್ನು ಬಲಾಢ್ಯ, ಸಬಲ ಮತ್ತು ಸ್ವಯಂ ಸಾಮರ್ಥ್ಯ ಸಂಸ್ಥೆಯಾಗಿ ಮಾರ್ಪಾಡಿಸಿ ಸಾಲದ ಪ್ರಮಾಣವನ್ನು ಹೆಚ್ಚಿಸಲು ಹತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಕ್ರಮ ಕೈಗೊಳ್ಳಲಾಯಿತು.

ಸಹಕಾರಿ ಪತ್ತಿನ ಸಂಸ್ಥೆಗಳ ಪುನಶ್ಚೇತನಕ್ಕಾಗಿ ಪುನರ್ ಬಂಡವಾಳೀಕರಣ ಕೈಗೊಳ್ಳಲು ಕಾರ್ಯತಂಡವನ್ನು ರಚಿಸಲಾಯಿತು. ಬೆಳೆ ವಿಮಾ ಯೋಜನೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಯಿತು. ಪುನರ್ ಬಂಡವಾಳೀಕರಣ ಯೋಜನೆಯಲ್ಲಿ ಸಹಕಾರ ಪತ್ತಿನ ಸಂಸ್ಥೆಗಳಿಗೆ ರೂ.8000 ಕೋಟಿಗಳನ್ನು ಮೀಸಲಿಡಲಾಯಿತು. ಕಿಸಾನ್ ಕ್ರೆಡಿಟ್ ಕಾರ್ಡಗಳನ್ನು ಎಲ್ಲಾ ಅರ್ಹ ರೈತರುಗಳಿಗೆ ನೀಡಲು ಗುರಿ ನಿರ್ಧರಿಸಲಾಯಿತು. ರಾಜ್ಯ ಸರ್ಕಾರಗಳು ಬಹುರಾಜ್ಯ ಸಹಕಾರ ಕಾಯಿದೆಯನ್ನು ಪರಿಶೀಲಿಸುವ ಕಾರ್ಯವಹಿಸಲಾಯಿತು. ಅಲ್ಲದೇ ಗೋದಾಮುಗಳ ಮತ್ತು ವೇರ್‌ಹೌಸ್‌ಗಳ ನಿರ್ಮಾಣಕ್ಕೆ ಸಾಮಾನ್ಯ ಬಡ್ಡಿ ದರದಲ್ಲಿ ಸಾಲ ಹಾಗೂ ಗ್ರಾಮೀಣ ಭಂಡಾರ ಯೋಜನೆಗೆ ವಿಶೇಷ ಒತ್ತು ನೀಡಲಾಯಿತು.

**ಹನ್ನೊಂದನೇ ಪಂಚವಾರ್ಷಿಕ ಯೋಜನೆ (2007–12) :** ಸಾಂಸ್ಥಿಕ ಹಣಕಾಸು ಮತ್ತು ಸಹಕಾರದ ಬದಲಾವಣೆಗೆ ಒಂದು ಕಾರ್ಯ ತಂಡವನ್ನು ಕೇಂದ್ರ ಸರ್ಕಾರದ ಯೋಜನಾ ಆಯೋಗವು ನೇಮಿಸಿತು. ಈ ಕಾರ್ಯತಂಡವು ಕೃಷಿ ಸಾಲದ ವಿತರಣೆ ಇದರ ಗುಣಮಟ್ಟ ಬಂಡವಾಳದ ಬೆಲೆ, ವಸೂಲಾತಿಗೆ ಕಾನೂನಿನ ಸಹಾಯ ರೈತರ ಸಾಲದ ಹೊಣೆಗಾರಿಕೆ ಮತ್ತು ಕೃಷಿ ಸಾಲದ ಮೇಲಿನ ಪ್ರಭಾವವನ್ನು ವಿವರವಾಗಿ ಅಭ್ಯಸಿಸಿತು.

ಈ ಕಾರ್ಯತಂಡವು ಸಹಕಾರ ಸಂಘಗಳ ಸ್ಥಿತಿ ಮತ್ತು ದೇಶದ ಆರ್ಥಿಕ ವ್ಯವಸ್ಥೆಯ ಮೇಲಿನ ಪರಿಣಾಮವನ್ನು ಸಮಗ್ರವಾಗಿ ಪರಿಶೀಲಿಸಿತು. ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿ ಆಧುನಿಕ ಬೇಸಾಯ ಕ್ರಮಕ್ಕೆ ಹೆಚ್ಚಿನ ಮಹತ್ವ ನೀಡುವಂತೆ ಕಾರ್ಯತಂಡವು ಶಿಫಾರಸ್ಸು ಮಾಡಿತು.

**ಹನ್ನೆರಡನೇ ಪಂಚವಾರ್ಷಿಕ ಯೋಜನೆ (2012–17) :** ಈ ಯೋಜನೆಯಲ್ಲೂ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಉತ್ತೇಜಿಸಿದರು. 1990–91ರ ಆರ್ಥಿಕ ಉದಾರೀಕರಣ ನೀತಿಯ ನಂತರದ ಸಹಕಾರ ಕ್ಷೇತ್ರವು ಸ್ವಾವಲಂಬಿಯಾಗಿ ಬೆಳೆಯಬೇಕೆಂಬ ನೀತಿಯನ್ನು ಮುಂದುವರೆಸಲಾಯಿತು.

ಪಂಚವಾರ್ಷಿಕ ಯೋಜನಾ ಆಯೋಗವು 1951ರಿಂದ 2014ರವರೆಗಿದ್ದು ತದನಂತರ ಅದರ ಸ್ಥಳದಲ್ಲಿ ನೀತಿ ಆಯೋಗವನ್ನು ರಚಿಸಲಾಗಿರುತ್ತದೆ. ಈ ನೀತಿ (NITI – National Institute for Transforming India) ಆಯೋಗವನ್ನು ಯುನಿಯನ್ ಕ್ಯಾಬಿನೆಟ್‌ನ ದಿ : 01–01–2015ರ ತೀರ್ಮಾನದ ಪ್ರಕಾರ ರಚಿಸಲಾಗಿರುತ್ತದೆ. ಇದು ಆರ್ಥಿಕ ನೀತಿಯನ್ನು ರೂಪಿಸಿ ಕೇಂದ್ರ ಸರ್ಕಾರಕ್ಕೆ ಸಲಹೆ/ ಮಾರ್ಗದರ್ಶನ ನೀಡುವ ಸಂಸ್ಥೆಯಾಗಿರುತ್ತದೆ. ಇದಕ್ಕೆ ಹಣಕಾಸಿನ ಅಧಿಕಾರ ಇರುವುದಿಲ್ಲ. ಪ್ರಧಾನ ಮಂತ್ರಿಗಳು ಈ ಆಯೋಗದ ಎಕ್ಸ್– ಅಫಿಶಿಯೋ ಚೆರ್‌ಮನ್ ಆಗಿರುತ್ತಾರೆ.



# ಗಣೇಶ ಚತುರ್ಥಿ : ಏಕತೆ, ಸೌಹಾರ್ದತೆ ಹಾಗೂ ಸಾಮರಸ್ಯದ ಸಂಕೇತ

ಗಣೇಶ ಹಬ್ಬಕ್ಕೆ ಹಿಂದೂ ಸಂಸ್ಕೃತಿಯಲ್ಲಿ ಒಂದು ವಿಶೇಷ ಸ್ಥಾನವಿದೆ. ಪ್ರಥಮ ಪೂಜಿತ ಗಜಮುಖನನ್ನು ಆರಾಧಿಸಿದ ನಂತರವೆ ಪ್ರತಿಯೊಂದು ಶುಭಕಾರ್ಯಕ್ಕೂ ಚಾಲನೆ ನೀಡಲಾಗುತ್ತದೆ.

ಗಣೇಶನ ಚತುರ್ಥಿ ವಿಶೇಷವಾಗಿ ಮುದ್ದು ಮಕ್ಕಳು ಹಾಗೂ ಪ್ರಕೃತಿಯನ್ನು ಏಕಕಾಲಕ್ಕೆ ಪೂಜಿಸುವ ಹಬ್ಬವಾಗಿದೆ. ಈ ಹಬ್ಬದಲ್ಲಿ ಪುಟ್ಟ ಗಣೇಶನಿಗೆ ಪೂಜೆ ಸಲ್ಲಿಸುವುದು ಹಾಗೂ ಅವನಿಗೆ ಇಷ್ಟವಿರುವ ವೈವಿಧ್ಯಮಯ ಕಜ್ಜಾಯ, ತಿಂಡಿ ತಿನಿಸುಗಳನ್ನು ತಯಾರಿಸಿ ಬಡಿಸುವುದು ಮನೆಯ ಮುದ್ದು ಮಕ್ಕಳ ಇಷ್ಟಾರ್ಥಗಳನ್ನು ಈಡೇರಿಸಿ ಅವರನ್ನು ಖುಷಿ ಪಡಿಸುವ ಸಂಕೇತವಾಗಿದ್ದು ಆ ಮೂಲಕ ಮನೆಮಂದಿಯಲ್ಲಾ ಸಂಭ್ರಮಿಸುವುದೇ ಈ ಹಬ್ಬದ ವಿಶೇಷವಾಗಿದೆ. ಆನೆಯ ತಲೆಯನ್ನು ಹೊಂದಿರುವ ಗಣೇಶ ಪ್ರಕೃತಿಯನ್ನು ಪೂಜಿಸುವ ಸಂದೇಶ ಸಾರುವ ಸಂಕೇತವಾಗಿದೆ. ಮಕ್ಕಳನ್ನು ಮತ್ತು ಪ್ರಕೃತಿಯನ್ನು ಏಕ ಕಾಲಕ್ಕೆ ಪೂಜಿಸುವುದೇ ಗಣೇಶ ಚತುರ್ಥಿಯ ವಿಶೇಷವಾಗಿದೆ. ಜಾತಿ–ಮತ ಧರ್ಮ, ಭಾಷೆ, ಬಣ್ಣ ಮೀರಿ ಗಣೇಶ ಚತುರ್ಥಿಯನ್ನು ಜಗತ್ತಿನ ನಾನಾ ಭಾಗಗಳಲ್ಲಿ ಸಡಗರ ಸಂಭ್ರಮಗಳಿಂದ ಆಚರಿಸಲಾಗುತ್ತೆ. ಭಾರತವಲ್ಲದೆ ಇಂಡೋನೇಷ್ಯಾ ಸಹಿತ ಹಲವಾರು ದೇಶಗಳಲ್ಲಿ ಗಣೇಶ ಹಬ್ಬ ಆಚರಿಸಲಾಗುತ್ತದೆ.

### ಶ್ರಾವಣ ಮಾಸದಲ್ಲಿ ಸಾಲು ಸಾಲು ಹಬ್ಬಗಳದೆ ಸಂಭ್ರಮ

ಆಷಾಢ ಹೊರಳಿ ಶ್ರಾವಣ ಮಾಸ ಆರಂಭವಾಗುತ್ತಿದ್ದಂತೆ, ಹಬ್ಬಗಳ ಸಾಲು ಸಾಲು ಆಚರಣೆಗಳು. ಕೃಷ್ಣಾಷ್ಟಮಿ ಮುಗಿದು ಇದೀಗ ಗಣೇಶ ಚತುರ್ಥಿ ನಮ್ಮೆಲ್ಲರನ್ನು ಕೈ ಬೀಸಿ ಕರೆಯುತ್ತಿದೆ. ಪ್ರತೀ ವರ್ಷದಂತೆ ಈ ಬಾರಿಯೂ ಕೂಡ ಹಬ್ಬದ ಸಡಗರಕ್ಕೆ ಒಂದೆಡೆಯಿಂದ ತಳಿರು ತೋರಣದ ಬಿರುಸು ಪ್ರಾರಂಭಗೊಂಡಿದ್ದರೆ, ಮತ್ತೊಂದೆಡೆಯಿಂದ ತಿಂಗಳುಗಟ್ಟಲೆಯ ಪೂಜೆ ಸ್ವೀಕರಿಸಲು ಗಣೇಶನ ವಿಗ್ರಹ ಕೂಡ ಭರದಿಂದ ಸಿದ್ಧಗೊಳ್ಳುತ್ತಿದೆ. ಗಣೇಶ ಹಬ್ಬದ ವಿಶೇಷತೆಯೇ ಅದು. ಎಲ್ಲಾ ಹಬ್ಬಗಳ ಆಚರಣೆ ಹೆಚ್ಚೆಂದರೆ ಮೂರ್ನಾಲ್ಕು ದಿನಗಳಿದ್ದರೆ ಈ ಗಣೇಶ ಹಬ್ಬವು ಕೆಲವೆಡೆ ಬರೋಬ್ಬರಿ ಒಂದು ತಿಂಗಳವರೆಗೂ ಚಾಲ್ತಿಯಲ್ಲಿರುತ್ತದೆ. ಮಣ್ಣಿನ ಗಣಪನಿಗೆ ಅಲಂಕಾರ ಮಾಡಿ ಅದರ ಮುಂದೆ ನಮ್ಮೆಲ್ಲರ ತಾಪತ್ರಯಗಳನ್ನು ತಿಳಿಸಿ ಮನಸ್ಸು ಹಗುರಾಗಿಸಿ ಕೊನೆಗೆ ಆತನನ್ನು ನೀರಲ್ಲಿ ಲೀನಗೊಳಿಸುವುದು ಗಣೇಶ ಹಬ್ಬದ ವೈಶಿಷ್ಟ್ಯ.

ಮಹಾಮಾರಿ ಕೊರೋನಾ ಸಾಂಕ್ರಾಮಿದ ಹಿನ್ನಲೆಯಲ್ಲಿ ಜನಜಂಗುಳಿ ಸೇರಲು ಅವಕಾಶ ನೀಡದೆ ಸರಳವಾಗಿ ಗಣೇಶ ಹಬ್ಬ ಆಚರಿಸುವಂತೆ ಸರ್ಕಾರ ಆದೇಶ ಹೊರಡಿಸಿದ್ದು, ಸಾರ್ವಜನಿಕ ಗಣೇಶೋತ್ಸವ ಹಾಗೂ ಆ ಸಂಬಂಧದ ಮನರಂಜನೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸರಳವಾಗಿ ಆಚರಿಸಲು ರಾಜ್ಯ ಸರ್ಕಾರ ಕಠಿಣ ನಿಯಮಗಳನ್ನು ರೂಪಿಸಿದೆ.

### ಸಾರ್ವಜನಿಕ ಗಣೇಶೋತ್ಸವದ ಮೂಲಕ ಸ್ವಾತಂತ್ರ್ಯ ಹೋರಾಟಕ್ಕ ಬಲ ತುಂಬಿದ ಬಾಲಗಂಗಾಧರ ತಿಲಕ್

ಭಕ್ತಿ ಹಾಗೂ ಭಾವೈಕ್ಯತೆಯ ಹಿನ್ನೆಲೆಯಲ್ಲಿ ಬಾಲಗಂಗಾಧರ ತಿಲಕರ ಮುಂದಾಳತ್ವದಲ್ಲಿ ಹುಟ್ಟಿ ಬೆಳೆದ ಗಣೇಶ ಹಬ್ಬವು ಇಂದು ನಮ್ಮೆಲ್ಲರ ಅಚ್ಚುಮೆಚ್ಚಿನ ಹಬ್ಬ. ಚದುರಿ ಹೋಗಿದ್ದ ಅಂದಿನ ಅನಕ್ಷರಸ್ಥ ಸಮಾಜದಲ್ಲಿ ಸ್ವಾತಂತ್ರ್ಯ ಹೋರಾಟಕ್ಕಾಗಿ ಜನರನ್ನು ಒಂದೇ ವೇದಿಕೆಯಡಿ ಏಕೀಕರಣಗೊಳಿಸಲು ತಿಲಕರು ಆಯ್ಕೆ ಮಾಡಿದ್ದೇ ಈ ಗಣೇಶ ಹಬ್ಬವನ್ನು. ಜನರೂ ಅಷ್ಟೇ. ತಿಲಕರ ಕರೆಗೆ ಜಾತಿ–ಮತ ಭೇದವಿಲ್ಲದೆ ಬಹುಬೇಗನೆ ಸ್ಪಂದಿಸಿದರು. ದೇಶಾದ್ಯಂತ ಭಕ್ತಿಯ ಪ್ರವಾಹ ಹರಿಯುವುದರೊಂದಿಗೆ ಬ್ರಿಟಿಷರಿಗೆ ನಮ್ಮ ಏಕತೆಯ ಬಿಸಿಯನ್ನೂ ಮುಟ್ಟಿಸಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಗಣೇಶನ ಹಬ್ಬ ಕೇವಲ ಕುಟುಂಬದ ಆಚರಣೆಯಾಗಿತ್ತು. ಮನೆ–ಮನೆಗಳಲ್ಲಿ ಮಾತ್ರ ಆಚರಣೆಯಲ್ಲಿದ್ದ ಗಣೇಶೋತ್ಸವವನ್ನು ಲೋಕಮಾನ್ಯ ಬಾಲಗಂಗಾಧರ ತಿಲಕರು ಜನರಲ್ಲಿನ ಸ್ವಾತಂತ್ರ್ಯದ ಕಿಚ್ಚನ್ನು ಹೊರಗೆಡವುವ ಸಾಧನವಾಗಿ ಬಳಸಿಕೊಂಡರು. 1892ರಲ್ಲಿ ಮಹಾರಾಷ್ಟ್ರದಲ್ಲಿ ಬಾವ್ ಸಾಹೆಬ್ ಲಕ್ಷ್ಮಣ್ ಜವೇಲ್ ಅವರು ಪ್ರಪ್ರಥಮ ಸಾರ್ವಜನಿಕ ಗಣೇಶೋತ್ಸವನ್ನು ಆಚರಣೆ ಮಾಡಿದರಾದರೂ, 1893ರಲ್ಲಿ ತಿಲಕರು ಅದಕ್ಕೆ ಸಂಪೂರ್ಣ ಸಾರ್ವಜನಿಕ ಸ್ವರೂಪ ನೀಡಿದರು. ತಮ್ಮ ಕೇಸರಿ ಪತ್ರಿಕೆಯಲ್ಲಿ ಸಾರ್ವಜನಿಕ ಗಣೇಶೋತ್ಸವದ ಪರಿಕಲ್ಪನೆ ಕುರಿತು ಬರೆದಿದ್ದ ತಿಲಕರು, 1894ರಲ್ಲಿ ಪುಣೆಯ ಕೇಸರಿ ವಾಡದಲ್ಲಿ ಪ್ರಪ್ರಥಮ ಸಾರ್ವಜನಿಕ ಗಣೇಶೋತ್ಸವವನ್ನು ಆರಂಭಿಸಿದರು.

ಗಣೇಶ ಚತುರ್ಥಿಯ ಸಾಂಸ್ಕೃತಿಕ ಮಹತ್ವವನ್ನು ಅರಿತಿದ್ದ ಲೋಕಮಾನ್ಯ ತಿಲಕರು, ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರ ನಡುವಿನ ಅಂತರವನ್ನು ತುಂಬಲು, ಅವರ ನಡುವೆ ಕೆಳಹಂತದಲ್ಲಿ ಐಕ್ಯತೆ ಮೂಡಿಸುವುದಕ್ಕೆ ಸೂಕ್ತ ಸಂದರ್ಭವಾಗಿ ಗಣೇಶೋತ್ಸವದ ಆಚರಣೆಯನ್ನು ರಾಷ್ಟ್ರೀಯ ಹಬ್ಬವಾಗಿ ಸಮರ್ಪಕವಾಗಿ ಬಳಸಿಕೊಂಡರು. ಆರಂಭದಲ್ಲಿ ಇದು ಜಾತಿ–ಜಾತಿಗಳ ನಡುವಿನ





ಏಕತೆಯ ಪ್ರತೀಕದಂತೆ ಕಂಡು ಬಂದರೂ ಕ್ರಮೇಣ, ಬ್ರಿಟೀಷ್ ದುರಾಡಳಿತದ ವಿರುದ್ಧ ತಿಲಕರು ಆರಂಭಿಸಿದ ಪರೋಕ್ಷ ಹೋರಾಟ ಎಂಬುದು ಅರ್ಥವಾಯಿತು. ತಿಲಕರು ಬ್ರಿಟಿಷರ ವಿರುದ್ಧ ಭಾರತದ ಪ್ರತಿಭಟನೆಗೆ ಗಣೇಶನನ್ನು ಕೇಂದ್ರ ಬಿಂದುವಾಗಿ ಬಳಸಿಕೊಂಡರು. ಏಕೆಂದರೆ ಗಣೇಶ ಪ್ರತಿಯೊಬ್ಬರ ಪಾಲಿಗೂ ದೇವಸ್ವರೂಪಿಯಾಗಿದ್ದ.

ಮಹಾರಾಷ್ಟ್ರದಲ್ಲಿ ಪೇಶ್ವೆ ಆಡಳಿತದಲ್ಲಿ ಮುಖ್ಯ ಹಬ್ಬವಾಗಿದ್ದ ಗಣೇಶೋತ್ಸವ, ಸ್ವರಾಜ್ ಆಂದೋಲನದ ಸಂದರ್ಭದಲ್ಲಿ ಸಂಘಟಿತ ಸ್ವರೂಪ ಪಡೆಯಿತು. ಗಣೇಶನ ಬೃಹತ್ ವಿಗ್ರಹಗಳನ್ನು ಪ್ರತಿಷ್ಠಾಪಿಸಿ 10ನೇ ದಿನ ಎಲ್ಲ ವಿಗ್ರಹಗಳನ್ನು ವಿಸರ್ಜನೆ ಮಾಡುವ ಪ್ರಕ್ರಿಯೆಯನ್ನು ತಿಲಕರು ಆರಂಭಿಸಿದರು. ನೃತ್ಯ, ನಾಟಕಗಳು, ಕವಿತೆ ವಾಚನ, ಸಂಗೀತ ಗೋಷ್ಠಿಗಳು, ಚರ್ಚಾಗೋಷ್ಠಿಗಳು ಮುಂತಾದವುಗಳ ರೂಪದಲ್ಲಿ ಗಣೇಶೋತ್ಸವವು ಸಮುದಾಯದ ಪಾಲ್ಗೊಳ್ಳುವಿಕೆಗೆ ನೆರವಾಯಿತು. ಜನರ ಮೇಲೆ ನಿಯಂತ್ರಣ ಹೇರಲು ಬ್ರಿಟಿಷ್ ಆಡಳಿತವು ಸಾಮಾಜಿಕ ಮತ್ತು ರಾಜಕೀಯ ಸಭೆಗಳನ್ನು ಬಹಿಷ್ಕರಿಸಿದ ಸಂದರ್ಭದಲ್ಲಿ ಗಣೇಶೋತ್ಸವವು ಎಲ್ಲಾ ಜಾತಿ, ಸಮುದಾಯಗಳು ಒಂದು ಕಡೆ ಕಲೆಯುವ ತಾಣವಾಯಿತು.

**ಸಾವಿರಾರು ಕೋಟಿಯ ರೂಪಾಯಿ ಉದ್ಯಮವಾಗಿ ಬೆಳೆದ ಗಣೇಶೋತ್ಸವ**

ಸಾರ್ವಜಿಕ ಗಣೇಶೋತ್ಸವ ಇಂದು ಭಾರತದಲ್ಲಿ ಸಾವಿರಾರು ಕೋಟಿ ರೂಪಾಯಿ ಉದ್ಯಮವಾಗಿ ಬೆಳೆದಿದೆ. ಸಾರ್ವಜನಿಕ ಗಣೇಶೋತ್ಸವ ನಡೆಸುವ ಸಂಘ ಸಂಸ್ಥೆಗಳು ನೂರಾರು ಕೋಟಿರೂಪಾಯಿ ಉಳಿತಾಯ ಮಾಡಿ ಹಲಾವಾರು ರೀತಿಯಲ್ಲಿ ಸಮಾಜ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿವೆ. ಗಣೇಶೋತ್ಸವ ಆಚರಣೆಯ ಸಮಯದಲ್ಲಿ ಹೂ, ಹಣ್ಣು, ತರಕಾರಿ ಸಹಿತ ಕೃಷಿ ಉತ್ಪನ್ನಗಳು, ಪೂಜಾ ಸಾಮಗ್ರಿಗಳು ಖರೀದಿಸಲು ನೂರಾರು ಕೋಟಿ ರೂಪಾಯಿ ವಚ್ಚ ಮಾಡಲಾಗುತ್ತದೆ, ಗಣೇಶ ಮೂರ್ತಿ ತಯಾರಿಸುವ ಕುಶಲ ಕರ್ಮಿಗಳಿಗೆ ಕೈ ತುಂಬಾ ಕೆಲಸ. ಅಲಂಕಾರಿಕಾ ಸಾಮಗ್ರಿಗಳು ಹಾಗೂ ಮನರಂಜನಾ ಕ್ಷೇತ್ರದಲ್ಲೂ ದೊಡ್ಡ ಪ್ರಮಾಣದ ವ್ಯವಹಾರವಾಗುತ್ತದೆ. ಗಣೇಶೋತ್ಸವ ಭಾರತೀಯರಲ್ಲಿ ಹಬ್ಬದ ಸಡಗರದ ಜೊತೆಗೆ ದೊಡ್ಡ ಪ್ರಮಾಣದ ಆರ್ಥಿಕ ಚಟುವಟಿಕೆ ನಡೆಯಲು ಪ್ರೇರಣೆಯಾಗಿದೆ.

▸▸ **ಮಂಜುನಾಥ್ ನಾಯ್ಕ್,** ಹಿರಿಯ ಪತ್ರಕರ್ತರು, ಬೆಂಗಳೂರು.

# ಡಿಸೆಂಬರ್ ವೇಳೆಗೆ ದೇಶದ ಇ-ಕರೆನ್ಸಿ ಬಿಡುಗಡೆ : ಆರ್‌ಬಿಐ ಗವರ್ನರ್

**ಮುಂಬಯಿ :** ಬಹುನಿರೀಕ್ಷಿತ ಇ-ಕರೆನ್ಸಿ (ಡಿಜಿಟಲ್ ಕರೆನ್ಸಿ) ಯನ್ನು ಡಿಸೆಂಬರ್ ವೇಳೆಗೆ ಪ್ರಾಯೋಗಿಕವಾಗಿ ಬಿಡುಗಡೆ ಮಾಡಲಾಗುವುದು ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ. ಆದರೆ, ಡಿಜಿಟಲ್ ಕರೆನ್ಸಿಗೆ 'ಡಿಸ್ಟ್ರಿಬ್ಯೂಟೆಡ್ ಲೆಡ್ಜರ್ ಟೆಕ್ನಾಲಜಿ (ಡಿಎಲ್‌ಟಿ) ಬಳಕೆ ಮಾಡಬೇಕೆ ಅಥವಾ ಸೆಂಟ್ರಲೈಸ್ಡ್ ಲೆಡ್ಜರ್ ಬಳಕೆ ಮಾಡಬೇಕೆ ಎಂಬುದನ್ನು ಆರ್‌ಬಿಐ ಇನ್ನೂ ನಿರ್ಧರಿಸಬೇಕಿದೆ.

ಡಿಎಲ್‌ಟಿಯು ಕ್ರಿಪ್ಟೋಕರೆನ್ಸಿ ಆಧಾರಿತ ವೇದಿಕೆಯಾಗಿದೆ. ಇದಕ್ಕೆ ಯಾವುದೇ ಕೇಂದ್ರೀಕೃತ ಪ್ರಾಧಿಕಾರದ ಅಗತ್ಯವಿಲ್ಲ. ಆರ್‌ಬಿಐ ಈಗಾಗಲೇ ತನ್ನದೇ ಯೋಜನೆ ಸಿದ್ಧಪಡಿಸಿದೆ. ಸೆಂಟ್ರಲ್ ಬ್ಯಾಂಕ್ ಡಿಜಿಟಲ್ ಕರೆನ್ಸಿ (ಸಿಬಿಐಸಿ) ಬಿಡುಗಡೆಗೆ ಸಿದ್ಧತೆ ಮಾಡಿಕೊಳ್ಳುತ್ತಿದೆ ಎಂದು ಶಕ್ತಿಕಾಂತ ದಾಸ್ ತಿಳಿಸಿದ್ದಾರೆ.

ಡಿಜಿಟಲ್ ಕರೆನ್ಸಿ ಕುರಿತಂತೆ ಆರ್‌ಬಿಐ ಬಹಳ ಎಚ್ಚರಿಕೆಯಿಂದ ಕೆಲಸ ಮಾಡುತ್ತಿದೆ. ಏಕೆಂದರೆ ಇದೊಂದು ಹೊಸ ಉತ್ಪನ್ನವಾಗಿದೆ. ಡಿಜಿಟಲ್ ಕರೆನ್ಸಿ ಭಾರತಕ್ಕಷ್ಟೇ ಅಲ್ಲ ವಿಶ್ವಕ್ಕೇ ಹೊಸದಾಗಿದೆ. ಈ ನಿಟ್ಟಿನಲ್ಲಿ ಡಿಜಿಟಲ್ ಕರೆನ್ಸಿ ಕುರಿತಂತೆ ವಿವಿಧ ಆಯಾಮಗಳಲ್ಲಿ ಅಧ್ಯಯನ ಮಾಡಲಾಗುತ್ತಿದೆ. ಪ್ರಮುಖವಾಗಿ ಭದ್ರತೆ, ಭಾರತದ ಆರ್ಥಿಕತೆ ಮೇಲೆ ಇದರ ಪರಿಣಾಮ, ಆರ್ಥಿಕ ನೀತಿಗಳ ಮೇಲೆ ಇದರ ಪರಿಣಾಮ, ಹಣದ ಚಲಾವಣೆ ಮೊದಲಾದ ಸಂಗತಿಗಳ ಕುರಿತು ಸಮಗ್ರ ಅಧ್ಯಯನ ನಡೆಸುತ್ತಿರುವ ಕುರಿತು ಶಕ್ತಿಕಾಂತ ದಾಸ್ ತಿಳಿಸಿದ್ದಾರೆ.

ಇತ್ತೀಚೆಗಷ್ಟೇ ಆರ್‌ಬಿಐ ಡೆಪ್ಯುಟಿ ಗವರ್ನರ್ ಟಿ. ರಬಿಶಂಕರ್ ಅವರು ಡಿಜಿಟಲ್ ಕರೆನ್ಸಿ ಕುರಿತು ಹೇಳಿಕೆ ನೀಡಿದ್ದರು. ವಿಶ್ವದ ಬಹುತೇಕ ಎಲ್ಲ ಕೇಂದ್ರ ಬ್ಯಾಂಕುಗಳು ಕೂಡ ಡಿಜಿಟಲ್ ಕರೆನ್ಸಿ ಪರಿಚಯಿಸುವ ಯೋಜನೆಯಲ್ಲಿ ಎಂದು ಹೇಳಿದ್ದರು.

**ಈಗಾಗಲೇ ಇ-ರುಪಿ ಬಿಡುಗಡೆ :** ಇತ್ತೀಚೆಗಷ್ಟೇ ಪ್ರಧಾನಿ ನರೇಂದ್ರ ಮೋದಿ ಅವರು ಇ-ರುಪಿ ಬಿಡುಗಡೆ ಮಾಡಿದ್ದಾರೆ. ದೇಶದಲ್ಲಿ ಡಿಜಿಟಲ್ ಪಾವತಿಗಳನ್ನು ಉತ್ತೇಜಿಸುವುದು ಇ-ರುಪಿಯ ಪ್ರಮುಖ ಉದ್ದೇಶ. ಹಾಗೆಂದ ಮಾತ್ರಕ್ಕೆ ಇ-ರುಪಿ ಕ್ರಿಪ್ಟೋಕರೆನ್ಸಿಯಲ್ಲ. ಇದೊಂದು ಇ-ವೋಚರ್ ಆಧಾರಿತ ಡಿಜಿಟಲ್ ಪಾವತಿ ವೇದಿಕೆ. ಇದು ಪ್ರಿಪೇಯ್ಡ್ ಇ-ವೋಚರ್ ಆಗಿದ್ದು, ಇದನ್ನು ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ (NPCI) ಅಭಿವೃದ್ಧಿಪಡಿಸಿದೆ. ಇ-ರೂಪಾಯಿ ಅಥವಾ ಇ-ರುಪಿ **(e-RUPI)** ನಗದುರಹಿತ ಮತ್ತು ಇಂಟರ್‌ನೆಟ್ ಸಂಪರ್ಕ ರಹಿತ ಸಾಧನವಾಗಿದೆ. ಇದು ಕ್ಯೂಆರ್ ಕೋಡ್ ಅಥವಾ ಎಸ್‌ಎಂಎಸ್ ಸ್ಟ್ರಿಂಗ್ ಆಧಾರಿತ ಇ-ವೋಚರ್ ಆಗಿದ್ದು, ಫಲಾನುಭವಿಗಳ ಮೊಬೈಲ್‌ಗೆ ಕಳುಹಿಸಲಾಗುತ್ತದೆ. ಇದು ಯಾವುದೇ ಮಧ್ಯವರ್ತಿ ಒಳಗೊಳ್ಳದೆ ಸೇವಾ ಪೂರೈಕೆದಾರರಿಗೆ ಸಕಾಲಿಕವಾಗಿ ಪಾವತಿ ಮಾಡುತ್ತದೆ.

ಚಲಾವಣೆಗೆ ಭೌತಿಕ ಹಣವಿದೆ. ಇದರ ಜತೆಗೆ ಆನ್‌ಲೈನ್ ಪಾವತಿ, ಡಿಜಿಟಲ್ ಹಣ ವರ್ಗಾವಣೆಯೂ ಹೆಚ್ಚುತ್ತಿದೆ. ಈ ಸಂದರ್ಭದಲ್ಲಿ ಇ-ರುಪಿಯ ಅಗತ್ಯ ಏನಿತ್ತು ಎಂಬ ಪ್ರಶ್ನೆಯೂ ಎದುರಾಗುತ್ತಿದೆ. ಇ-ರುಪಿಯಿಂದ ಹಲವು ಅನುಕೂಲಗಳಿವೆ ಎಂದು ಹೇಳಲಾಗುತ್ತಿದೆ. ಇದರಿಂದ ಸರಕಾರಿ ಯೋಜನೆಗಳು, ಹಾಗೂ ಸೌಲಭ್ಯಗಳನ್ನು ತಲುಪಿಸುವಲ್ಲಿ ಹಣದ ಪೋಲಾಗುವಿಕೆಯನ್ನು ತಪ್ಪಿಸಬಹುದು ಎನ್ನಲಾಗಿದೆ.

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1. ಸಹಕಾರ ಕಾಯೆಯಡಿಯಲ್ಲಿ ನಿಯಮಗಳ ರಚನೆಗೆ ಅಧಿಕಾರ ವಿನಿಯಿತವಾಗಿರುವುದು.**

ಎ) ನಿಬಂಧಕರಿಗೆ

ಬಿ) ಮಾನ್ಯ ಮುಖ್ಯಮಂತ್ರಿಯವರಿಗೆ

ಸಿ) ಸಹಕಾರ ಮಂತ್ರಿಯವರಿಗೆ

ಡಿ) ಸರ್ಕಾರ

**2. ಸಹಕಾರ ಕಾಯ್ದೆಯಡಿಯಲ್ಲಿ ಅಮಲ್ಜಾರಿ ಆದೇಶ ನೀಡುವ ಅಧಿಕಾರ ____________ ಇವರಲ್ಲಿ ಇರುತ್ತದೆ.**

ಎ) ಡಿಕ್ರಿ ಹೋಲ್ಡರ್

ಬಿ) ಮಾರಾಟಾಧಿಕಾರಿ

ಸಿ) ವಸೂಲಾಧಿಕಾರಿ

ಡಿ) ಸಾಲಗಾರ

**3. ಸಹಕಾರ ಸಂಘದ ಆಡಳಿತ ಮಂಡಲಿಯನ್ನು ಪುನರ್ ಸ್ಥಾಪಿಸುವ ಸಂದರ್ಭ __________ ಆಗಿದೆ.**

ಎ) ಆಡಳಿತ ಮಂಡಳಿ ರದ್ದುಗೊಳಿಸಿದಾಗ

ಬಿ) ಸಹಕಾರ ಸಂಘವನ್ನು ವಿಲೀನ ಹಾಗೂ ವಿಭಜನೆಗೊಳಿಸಿದಾಗ

ಸಿ) ಆಡಳಿತ ಮಂಡಲಿಯನ್ನು ಅಮಾನತ್ತುಗೊಳಿಸಿದಾಗ

ಡಿ) ಸಮಾಪನೆಗೊಳಿಸಿದಾಗ

**4. ಸಹಕಾರ ಸಂಘದಲ್ಲಿ ವಾರ್ಷಿಕ ಮಹಾಸಭೆ ದಿನಾಂಕಕ್ಕೆ ________ ಪೂರ್ವದಲ್ಲಿ ಸದಸ್ಯರನ್ನಾಗಿ ಮಾಡಿಕೊಳ್ಳಲು ಅಕಾಶವಿರುವುದಿಲ್ಲ**

ಎ) 60 ದಿವಸಗಳು

ಬಿ) 15 ದಿವಸಗಳು

ಸಿ) 30 ದಿವಸಗಳು

ಡಿ) 40 ದಿವಸಗಳು

**5. ಯಾವ ಸಂದರ್ಭದಲ್ಲಿ ಸಭಾ ಅಧ್ಯಕ್ಷರು ಎರಡನೆಯ ಅಥವಾ ನಿರ್ಣಾಯಕ ಮತ ಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದು.**

ಎ) ಆಡಳಿತ ಮಂಡಲಿ ಚುನಾವಣೆಯಲ್ಲಿ

ಬಿ) ಪದಾಧಿಕಾರಿಗಳ ಚುನಾವಣೆಯಲ್ಲಿ

ಸಿ) ಪ್ರತಿನಿಧಿ ಆಯ್ಕೆ ಚುನಾವಣೆಯಲ್ಲಿ

ಡಿ) ಯಾವುದು ಅಲ್ಲ

**6. ಮಂಡಲಿ – ಎಂದರೆ :**

ಎ) ಸಹಕಾರ ಸಂಘದಲ್ಲಿನ ಆಡಳಿತ ಮಂಡಲಿ

ಬಿ) ಸಹಕಾರ ಸಂಘದ ಸರ್ವಸದಸ್ಯರ ಸಭೆ

ಸಿ) ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕ ಮತ್ತು ಸಿಬ್ಬಂದಿ

ಡಿ) ಸಹಕಾರ ಸಂಘದ ಪದಾಧಿಕಾರಿಗಳು

**7. ಸಹಕಾರ ಸಂಘದ ಮೂಲ ಉದ್ದೇಶ.**

ಎ) ಮೂಲಭೂತವಾಗಿ ವ್ಯಾಪಾರ–ವ್ಯವಹಾರ

ಬಿ) ಮೂಲಭೂತವಾಗಿ ಪ್ರಜಾಸತ್ತಾತ್ಮಕ ವ್ಯವಸ್ಥೆ

ಸಿ) ವ್ಯಾಪಾರ–ವ್ಯವಹಾರ ಹಾಗೂ ಪ್ರಜಾಸತ್ತಾತ್ಮಕ ವ್ಯವಸ್ಥೆ

ಡಿ) ಯಾವುದು ಅಲ್ಲ

**8. ಸಹಕಾರ ಸಂಘದಲ್ಲಿ ಅಂತಿಮ ಅಧಿಕಾರ ನಿಹಿತವಾಗಿರುವುದು ____**

ಎ) ಆಡಳಿತ ಮಂಡಲಿ

ಬಿ) ಸಂಘದ ಅಧ್ಯಕ್ಷರು

ಸಿ) ಸರ್ವ ಸದಸ್ಯರ ಸಭೆ

ಡಿ) ಮುಖ್ಯ ಕಾರ್ಯನಿರ್ವಾಹಕರು

**9. ಸಹಕಾರ ಸಂಘದಲ್ಲಿ ಸದಸ್ಯ ಹೊಂದಬಹುದಾದ ಷೇರು ಮೊತ್ತ __________**

ಎ) ಒಂದು ಷೇರು ಮೊತ್ತ

ಬಿ) ಹತ್ತು ಷೇರುಗಳ ಮೊತ್ತ

ಸಿ) ಅನಿಯಮಿತ ಷೇರು ಮೊತ್ತ

ಡಿ) ಯಾವುದು ಅಲ್ಲ

**10. ರಾಜ್ಯ ಸರ್ಕಾರವು, ನೆರವು ಪಡೆದಿರುವ ಸಹಕಾರ ಸಂಘದ ಆಡಳಿತ ಮಂಡಲಿಗೆ ಸರ್ಕಾರದ ನಾಮಿನಿಯಾಗಿ _______ ಪ್ರತಿನಿಧಿಗಳನ್ನು ನೇಮಿಸಲು ಅವಕಾಶವಿದೆ.**

ಎ) ಮೂರು ಪ್ರತಿನಿಧಿಗಳು

ಬಿ) ಐದು ಪ್ರತಿನಿಧಿಗಳು

ಸಿ) ಒಬ್ಬ ಪ್ರತಿನಿಧಿ

ಡಿ) ಎರಡು ಪ್ರತಿನಿಧಿ

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

**1 - C, 2 -C, 3 –D, 4 –C, 5 –C , 6 –C, 7 –C, 8 – C, 9 –C, 10 –C**